**ಮೈಸೂರು ವಿಶ್ವವಿದ್ಯಾನಿಲಯ**

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:** 26-11-2025ರ **ಬುಧವಾರ ಪೂರ್ವಾಹ್ನ** 11-30 **ಗಂಟೆಗೆ ನಡೆದ "ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆ"ಯ ನಡಾವಳಿ.**

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಎನ್.ಕೆ. ಲೋಕನಾಥ್, ಕುಲಪತಿಗಳು | - ಅಧ್ಯಕ್ಷರು |
| 2. | ಪ್ರೊ. ಎಸ್.ಜೆ. ಮಂಜುನಾಥ್ | - ಸದಸ್ಯರು |
| 3. | ಡಾ. ಟಿ.ಆರ್. ಚಂದ್ರಶೇಖರ್ | - ಸದಸ್ಯರು |
| 4. | ಶ್ರೀ ಕೆ. ಗೋಕುಲ್ ಗೋವರ್ಧನ್ | - ಸದಸ್ಯರು |
| 5. | ಡಾ. ಮಹೇಶ್ ಟಿ.ಬಿ. | - ಸದಸ್ಯರು |
| 6. | ಡಾ. ಬಿ.ಆರ್. ಜಯಕುಮಾರಿ | - ಸದಸ್ಯರು |
| 7. | ಡಾ. ಹೆಚ್.ಎಂ. ಮಹೇಶ | - ಸದಸ್ಯರು |
| 8. | ಶ್ರೀ ಮಹದೇಶು | - ಸದಸ್ಯರು |
| 9. | ಶ್ರೀ ನಾಗರಾಜು ಸಿ. | - ಸದಸ್ಯರು |
| 10. | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ | - ಸದಸ್ಯರು |
| 11. | ಡಾ. ಶಿಲ್ಪ ಜೆ. | - ಸದಸ್ಯರು |
| 12. | ಡಾ. ನಟರಾಜು ಹೆಚ್.ಎಸ್. | - ಸದಸ್ಯರು |
| 13. | ಶ್ರೀ ಎಂ. ಶಂಕರ | - ಸದಸ್ಯರು |
| 14. | ಡಾ. ಎಂ. ಪುಷ್ಪವತಿ | - ಸದಸ್ಯರು |
| 15. | ಡಾ. ಎನ್. ನಾಗರಾಜ, ಕುಲಸಚಿವರು (ಪರೀಕ್ಷಾಂಗ) | - ಸದಸ್ಯರು |
| 16. | ಶ್ರೀಮತಿ ರೇಖಾ ಕೆ.ಎಸ್., ಹಣಕಾಸು ಅಧಿಕಾರಿಗಳು | - ವಿಶೇಷ ಆಹ್ವಾನಿತರು |
| 17. | ಶ್ರೀಮತಿ ಸವಿತಾ ಎಂ.ಕೆ., ಕುಲಸಚಿವರು | - ಸದಸ್ಯ ಕಾರ್ಯದರ್ಶಿ |

**ಅನುಪಸ್ಥಿತರು**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀಮತಿ ಡಿ.ಎಸ್.ಪ್ರತಿಮಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಶ್ರೀ ಶೇಖರ್, ಜಂಟಿ ನಿರ್ದೇಶಕರು, ಬೆಂಗಳೂರು.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಗೌರವಾನ್ವಿತ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮಾನ್ಯ ಕುಲಪತಿಯವರು ಸಭೆಯಲ್ಲಿ ಎಲ್ಲಾ ಸಿಂಡಿಕೇಟ್ ಸದಸ್ಯರಿಗೆ ಸಂವಿಧಾನ ದಿನದ ಶುಭಾಶಯಗಳನ್ನು ತಿಳಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
| --- | --- |
| ದಿನಾಂಕ 09-10-2025ರಂದು ಜರುಗಿದ "ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. | |

- ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ದಿನಾಂಕ 20-08-2025ರಲ್ಲಿ ನಡೆದ ಐದನೇ ಸಿಂಡಿಕೇಟ್ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 2025/5.26 ರಲ್ಲಿ ಬಾಡಿಗೆ ವಸೂಲಾತಿಯ ವಿಚಾರವಾಗಿ ಪ್ರಸ್ತಾಪಿಸಲಾಗಿರುತ್ತದೆ. ಈ ಸಂಬಂಧ ತೆಗೆದುಕೊಂಡ ಕ್ರಮಗಳೇನು ಎಂದು ಕೇಳಿದರು.

  ಕುಲಸಚಿವರು ಮಾತನಾಡಿ, ಬಾಡಿಗೆ ವಸೂಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಆರು ಸಭೆಗಳನ್ನು ನಡೆಸಲಾಗಿರುತ್ತದೆ. ಎಸ್‌ಟಿಡಿ ಬೂತ್‌ರವರು ಬಾಡಿಗೆ ಮೊತ್ತವನ್ನು ಕಡಿಮೆ ಮಾಡುವ ಕುರಿತು ಮನವಿಯನ್ನು ಸಲ್ಲಿಸಿರುತ್ತಾರೆ. ವಿಶ್ವವಿದ್ಯಾನಿಲಯ ಮನವಿಗೆ ಸ್ಪಂದಿಸಿ ರೂ.500/- ಬಾಡಿಗೆಯನ್ನು ಕಡಿತಗೊಳಿಸಿರುತ್ತದೆ. ಕೆಲವು ಮಳಿಗೆದಾರರು ತಾವೇ ಮಳಿಗೆಯನ್ನು ನಿರ್ಮಿಸಿಕೊಂಡಿರುತ್ತಾರೆ ಆದ್ದರಿಂದ ಬಾಡಿಗೆಯನ್ನು ಕಡಿಮೆ ಮಾಡಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಇದಕ್ಕೆ ಬಾಡಿಗೆದಾರರ ಮನವಿಯನ್ನು ಒಪ್ಪಲು ಸಾಧ್ಯವಾಗದ ಕಾರಣ ಕೇವಲ ರೂ.500/- ಮಾತ್ರ ಬಾಡಿಗೆಯನ್ನು ಕಡಿಮೆ ಮಾಡುವುದಾಗಿ ತಿಳಿಸಿರುತ್ತೇವೆಂದರು. ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಬ್ಯಾಂಕ್, ಪೋಸ್ಟ್ ಆಫೀಸ್‌ರವರು ಈ ವಿಷಯವಾಗಿ ತಮ್ಮ ಮೇಲಾಧಿಕಾರಿಯವರ ಗಮನಕ್ಕೆ ತರಲಾಗಿದೆ, ಉತ್ತರ ಬಂದ ಕೂಡಲೇ ತಿಳಿಸಲಾಗುವುದೆಂದು ಹೇಳಿರುತ್ತಾರೆ. ಪೆಟ್ರೋಲ್ ಬಂಕ್‌ನ ಬಾಡಿಗೆ ವಸೂಲಾತಿಯನ್ನು ಕಡ್ಡಾಯವಾಗಿ ಮಾಡಲು ತಿಳಿಸಲಾಗಿದೆ. ಬಾಡಿಗೆ ನೀಡುವ ಕುರಿತು ಒಪ್ಪದಿದ್ದ ಪರಿಸ್ಥಿತಿ ಬಂದಾಗ ಯಾವ ಕ್ರಮಕೈಗೊಳ್ಳಬೇಕು ಎಂಬುದರ ಕುರಿತು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರೊಂದಿಗೆ ಸಹ ಚರ್ಚಿಸಲಾಗಿರುತ್ತದೆಯೆಂದು ತಿಳಿಸಿದರು.

- ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಕಳೆದ ಸಭೆಯ ನಡಾವಳಿಯಲ್ಲಿ ದಿನಾಂಕ 20-08-2025ರಲ್ಲಿ ನಡೆದ ಐದನೇ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ 2025/5.13 ವಿಷಯಕ್ಕೆ ಸಂಬಂಧಿಸಿದಂತೆ ಯುವರಾಜ ಕಾಲೇಜು ಮತ್ತು ಮಾನಸಗಂಗೋತ್ರಿಯ ಆವರಣದಲ್ಲಿ ಮೊಬೈಲ್ ಟವರ್ ಸ್ಥಾಪನೆಯ ಕುರಿತು Indus tower private limitedಗೆ ಖಾಲಿ ಜಾಗ ನೀಡುವ ವಿಷಯದಲ್ಲಿ ನಡಾವಳಿಯಲ್ಲಿ ತಪ್ಪಾಗಿದೆ. ಕಳೆದ ಸಿಂಡಿಕೇಟ್ ಸಭೆಯಲ್ಲಿ ಕೂಡ ಮೊಬೈಲ್ ಟವರ್ ವಿಷಯವಾಗಿ ಪ್ರಸ್ತಾಪ ಮಾಡಲಾಗಿರುತ್ತದೆ. ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಅಂತಿಮ ತೀರ್ಮಾನವಾಗಿರುತ್ತದೆ. ಮಾನ್ಯ ಪರೀಕ್ಷಾಂಗ ಕುಲಸಚಿವರು ಸುದೀರ್ಘ ಹೇಳಿಕೆಯನ್ನು ಸಲಹೆ ರೂಪದಲ್ಲಿ ಕೊಟ್ಟಿರುತ್ತಾರೆ. ಅವರ ಹೇಳಿಕೆ ಸಂಪೂರ್ಣವಾಗಿ ದಾಖಲಾಗಿರುವುದಿಲ್ಲ, ಬದಲಾಗಿ ಅಂದಿನ ತೀರ್ಮಾನದಂತೆ ನೆಟ್‌ವರ್ಕ್‌ಗಳ ಸಮಸ್ಯೆ ನಿವಾರಿಸುವಂತೆ ವಿವಿಧ ಕಂಪನಿ/ಸಂಸ್ಥೆಗಳಿಗೆ ಪತ್ರ ಬರೆದು ನೆಟ್‌ವರ್ಕ್ ಸುಧಾರಣೆ ಮಾಡುವ ಸಂಬಂಧ ಕ್ರಮವಹಿಸುವಂತೆ ತಿಳಿಸಿ ವಿಷಯವನ್ನು ಮುಂದೂಡಲಾಗಿತು. ಆದರೆ ಇಲ್ಲಿ ತೀರ್ಮಾನ ಬೇರೆಯಾಗಿದೆ. ತೀರ್ಮಾನವನ್ನು ತಿದ್ದುಪಡಿ ಮಾಡಬೇಕೆಂದು ಕುಲಸಚಿವರಿಗೆ ಪತ್ರ ನೀಡಲಾಗಿದೆ. ಆದ್ದರಿಂದ ಸಭೆಯ ನಡಾವಳಿಯಲ್ಲಿ ತೀರ್ಮಾನವನ್ನು ತಿದ್ದುಪಡಿ ಮಾಡಬೇಕೆಂದು ತಿಳಿಸಿದರು.

  ಶ್ರೀ ಎಂ.ಶಂಕರ ರವರು ಮಾತನಾಡಿ, ಮೊಬೈಲ್‌ಗಳ ನೆಟ್‌ವರ್ಕ್ ಸಮಸ್ಯೆ ಹೆಚ್ಚಾಗಿದ್ದು, ಸಾವಿರಾರು

ವಿದ್ಯಾರ್ಥಿಗಳು ವ್ಯಾಸಂಗ ಮಾಡುವಲ್ಲಿ ನೆಟ್‌ವರ್ಕ್ ಸಮಸ್ಯೆಗಳಾಗಬಾರದು ಎಂದು ತಿಳಿಸಿದರು.

ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಪ್ರಮುಖವಾಗಿ ವಿದ್ಯಾರ್ಥಿಗಳಿಗೆ ನೆಟ್‌ವರ್ಕ್ ಸಮಸ್ಯೆ ಇದೆ, ನೆಟ್‌ವರ್ಕ್ ಸಮಸ್ಯೆ ಸರಿಪಡಿಸಿ ಎಂದು ಬರೆಯಬೇಕಾಗಿರುತ್ತದೆ. ಟವರ್ ಎಂದರೆ ಕೇವಲ ಐರನ್ ಸ್ಟೀಲ್ ಫ್ರೇಮ್‌ವರ್ಕ್ ಆಗಿರುತ್ತದೆ ಎಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಬಿ.ಎಸ್.ಎನ್.ಎಲ್.ರವರನ್ನು ಕರೆಸಿ ಅವರಿಂದ ಪರಿಶೀಲಿಸಲಾಗುತ್ತದೆ. ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಕುಲಸಚಿವ (ಪರೀಕ್ಷಾಂಗ)ರವರ ಹೇಳಿಕೆಯೇ ತೀರ್ಮಾನವಾಗಿರುತ್ತದೆ. ಏಕೆ ಕುಲಸಚಿವ (ಪರೀಕ್ಷಾಂಗ)ರವರ ಹೇಳಿಕೆಯನ್ನು ನಮೂದಾಗಿರುವುದಿಲ್ಲ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಡಾ. ಟಿ.ಆರ್.ಚಂದ್ರಶೇಖರ್‌ರವರು ತಿಳಿಸಿದಂತೆ ತಿದ್ದುಪಡಿ ಮಾಡಲಾಗುವುದೆಂದು ತಿಳಿಸಿದರು.

ಡಾ. ಹೆಚ್.ಎಂ.ಮಹೇಶ ರವರು ಮಾತನಾಡಿ, ಮೊದಲಿನಂತೆ ಬಿ.ಎಸ್.ಎನ್.ಎಲ್‌ರವರು ಸಮಸ್ಯೆ ಪರಿಹರಿಸುವ ಕಾರ್ಯ ಮಾಡುತ್ತಿಲ್ಲ ಎಂದು ತಿಳಿಸಿದರು.

ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಉಳಿದ ನೆಟ್‌ವರ್ಕ್ ಕಂಪನಿಯವರು ಸಹ ಇದ್ದಾರೆ ಅವರಲ್ಲಿ ಚರ್ಚಿಸಬಹುದಾಗಿ ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿ ಟವರ್ ಅಳವಡಿಸುವುದಕ್ಕೆ ಸಿಂಡಿಕೇಟ್ ಸಭೆಯು ಅನುಮೋದಿಸಿರುತ್ತದೆ. ಆದರೆ ಮಾನಸಗಂಗೋತ್ರಿಯ ಆವರಣದಲ್ಲಿರುವ ಕ್ರಿಕೆಟ್ ಗ್ರೌಂಡ್‌ನ ಹಿಂಭಾಗ ಮೊಬೈಲ್ ಟವರ್ ಅಳವಡಿಸುವ ಕುರಿತು ಒಂದು ಮೊಬೈಲ್ ಟವರ್ ಕಂಪನಿಗೆ ಸೀಮಿತವಾಗದೆ ಇತರೇ ಕಂಪನಿಗಳು ಭಾಗವಹಿಸುವುದಕ್ಕೆ ಅವಕಾಶ ಕಲ್ಪಿಸುವುದು ಸೂಕ್ತ ಎಂದು ಹಿಂದಿನ ಸಿಂಡಿಕೇಟ್‌ನಲ್ಲಿ ತಿಳಿಸಲಾಗಿದೆ. ಬಿ.ಎಸ್.ಎನ್.ಎಲ್. ಐಡಿಯಾ, ವೋಡಫೋನ್, ಏರ್‌ಟೆಲ್‌ರವರು ಮೊದಲಿನಂತೆ ಟವರ್ ಹಾಕುವುದಕ್ಕೆ ಅವಕಾಶವಿರುವುದಿಲ್ಲ. ನಮಗೆ ತಿಳಿದಿರುವ ಹಾಗೆ ದೇಶದಲ್ಲಿ 5 ಕಂಪನಿಗಳಿಗೆ ಮಾತ್ರ ಟವರ್ ಹಾಕುವುದಕ್ಕೆ ಅವಕಾಶ ನೀಡಲಾಗಿದೆ. ಏಕೆಂದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಬೈಲ್ ಟವರ್ ಅಳವಡಿಸಿರುವುದರ ವಿರುದ್ಧ ದೂರುಗಳು ಬರುತ್ತಿರುವ ಕಾರಣ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಒಂದು ಟವರ್ ಅಳವಡಿಸಿಕೊಂಡು ಅದರಲ್ಲಿ ವಿವಿಧ ಕಂಪನಿಗಳ ನೆಟ್‌ವರ್ಕ್ ಅಳವಡಿಸುವುದಕ್ಕೆ ಸೂಚಿಸಿರುತ್ತದೆ. ವಿಶ್ವವಿದ್ಯಾನಿಲಯ ಸರ್ಕಾರಿ ಸಂಸ್ಥೆಯಾಗಿರುವುದರಿಂದ ಒಂದು ಮೊಬೈಲ್ ಟವರ್ ಕಂಪನಿಗೆ ಸೀಮಿತವಾಗದೆ ಇತರೇ ಕಂಪನಿಗಳು ಭಾಗವಹಿಸುವುದಕ್ಕೆ ಅವಕಾಶ ಕಲ್ಪಿಸುವುದು.. ಒಂದು ಟೆಂಡರ್ ಆಹ್ವಾನಿಸಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಟವರ್ ಅಳವಡಿಸಲು ಸ್ಥಳ ನೀಡಲಾಗುವುದು ಎಂದು ಜಾಹೀರಾತು ನೀಡುವುದು ಸೂಕ್ತವೆಂದರು.

ಶ್ರೀ ಮಹದೇಶು ರವರು ಮಾತನಾಡಿ, ಟವರ್ ಅವಶ್ಯಕತೆ ಇದೆ ಇದರ ಬಗ್ಗೆ ಕ್ರಮಕೈಗೊಳ್ಳುವುದಕ್ಕೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಟವರ್ ಅಳವಡಿಸುವ ಕುರಿತು ನಿಯಮಾನುಸಾರ ಟೆಂಡರ್ ಆಹ್ವಾನಿಸಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ವಿದ್ಯಾರ್ಥಿಗಳ ಅನುಕೂಲಕ್ಕೆ ಹೆಚ್ಚು ಪೂರಕವಾಗುವಂತೆ ಉತ್ತಮ ನೆಟ್‌ವರ್ಕ್ ಸೌಲಭ್ಯವನ್ನು ಒದಗಿಸುವ ಕಂಪನಿಯವರೊಂದಿಗೆ ಸಭೆ ನಡೆಸಿ, ಈ ಕುರಿತು ಅಗತ್ಯ ಕ್ರಮವಹಿಸುವುದಾಗಿ ತಿಳಿಸಿದರು.

ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಈ ನಿಟ್ಟಿನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 3(4) ಗಮನದಲ್ಲಿಟ್ಟುಕೊಂಡು ಸರ್ಕಾರದ ಪೂರ್ವಾನುಮತಿ ಪಡೆದು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

**ತೀರ್ಮಾನ:** ವಿಶ್ವವಿದ್ಯಾನಿಲಯದ ಆವರಣದಲ್ಲಿ ಮೊಬೈಲ್ ಟವರ್ ಅಳವಡಿಸುವ ಮುನ್ನ ನೆಟ್‌ವರ್ಕ್ ಸಮಸ್ಯೆಯನ್ನು ಬಗೆಹರಿಸುವ ಸಂಬಂಧ ಬಿಎಸ್‌ಎನ್‌ಎಲ್, ಏರ್‌ಟೆಲ್, ವಿಐ, ಇತ್ಯಾದಿ ಕಂಪನಿಗಳಿಗೆ ನೆಟ್‌ವರ್ಕ್ ಸಮಸ್ಯೆಯನ್ನು ಬಗೆಹರಿಸಲು ಅಗತ್ಯ ಕ್ರಮವಹಿಸುವಂತೆ ಪತ್ರ ವ್ಯವಹಾರ ನಡೆಸುವುದು ಹಾಗೂ ಮೊಬೈಲ್ ಟವರ್ ಅಳವಡಿಸುವ ಸಂಬಂಧ ಕಂಪನಿಗಳಿಂದ ದರಪಟ್ಟಿಯನ್ನು ಪಡೆದು ಉತ್ತಮ ಸೌಲಭ್ಯ ಮತ್ತು ಹೆಚ್ಚಿನ ಬಾಡಿಗೆ ನೀಡುವವರನ್ನು ಗುರುತಿಸಿ ನಂತರ ಕ್ರಮವಹಿಸಲು ತೀರ್ಮಾನಿಸಲಾಯಿತು.

- ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ದಿನಾಂಕ 20-08-2025ರಲ್ಲಿ ನಡೆದ ಐದನೇ ಸಿಂಡಿಕೇಟ್ ಸಾಮಾನ್ಯ ಸಭೆಯ ಇತರೆ ವಿಷಯ ಸಂಖ್ಯೆ 8ರಲ್ಲಿ ಇಎಂಆರ್‌ಸಿ ನಿರ್ದೇಶಕರ ಹುದ್ದೆಗೆ ಭರ್ತಿ ಮಾಡಲು ಅಗತ್ಯ ಕ್ರಮವಹಿಸುವಂತೆ ತೀರ್ಮಾನಿಸಲಾಗಿತ್ತು. ಈ ಸಂಬಂಧ ಕೈಗೊಂಡ ಕ್ರಮವೇನೆಂದು ಕೇಳಿದರು.

  ಮಾನ್ಯ ಕುಲಪತಿಯವರು ಮಾತನಾಡಿ, ಇಎಂಆರ್‌ಸಿ ನಿರ್ದೇಶಕರ ಹುದ್ದೆಗೆ ಅಧಿಸೂಚನೆಯನ್ನು ಹೊರಡಿಸಿ ಸಂದರ್ಶನಕ್ಕೆ ಸಿದ್ಧತೆ ಮಾಡಲಾಗಿರುತ್ತದೆ. ಆದರೆ ಕೇಂದ್ರ ಸರ್ಕಾರದ ವತಿಯಿಂದ University Grants Commission ಅನ್ನು Higher Research Council ಎಂದು ನಾಮನಿರ್ದೇಶನ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಈ ಎಲ್ಲಾ ಪ್ರಕ್ರಿಯೆಯು ಸರ್ಕಾರದ ಮಟ್ಟದಲ್ಲಿ ಪೂರ್ಣಗೊಂಡ ನಂತರ ಇಎಂಆರ್‌ಸಿ ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡುವುದರ ಸಂಬಂಧ ಅಗತ್ಯ ಕ್ರಮವಹಿಸಲಾಗುವುದೆಂದು ತಿಳಿಸಿದರು.

- ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ದಿನಾಂಕ 20-08-2025ರಲ್ಲಿ ನಡೆದ ಐದನೇ ಸಿಂಡಿಕೇಟ್ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 14ರಲ್ಲಿ ಪ್ರೊ. ದೇವರಾಜೇಗೌಡ ಇವರು ಯುವರಾಜ ಕಾಲೇಜಿನ ಪ್ರಾಂಶುಪಾಲರ ಅವಧಿಯಲ್ಲಿ ನಡೆದಿರುವ ಹಣ ದುರುಪಯೋಗದ ಕುರಿತು ತನಿಖೆ ಮಾಡುವುದರ ಬಗ್ಗೆ ಸಮಿತಿ ರಚಿಸಲಾಗಿದೆಯೇ ಎಂಬುದರ ಕುರಿತು ಮಾಹಿತಿ ನೀಡುವಂತೆ ತಿಳಿಸಿದರು.

  ಹಣಕಾಸು ಅಧಿಕಾರಿಯವರು ಮಾತನಾಡಿ, ಯುವರಾಜ ಕಾಲೇಜಿನ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ, ಕಳೆದ 15 ದಿನಗಳಿಂದ 2021-22 ಮತ್ತು 2022-23ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ವಿಶೇಷ ಲೆಕ್ಕಪರಿಶೋಧಕರಿಂದ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು.

- ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಆರನೇ ಸಾಮಾನ್ಯ ಸಭೆ 2025/6.6ರಲ್ಲಿ ದೈಹಿಕ ಶಿಕ್ಷಣ ವಿಭಾಗದ ತರಬೇತಿ ನಡೆಯುವ ಸ್ಥಳಗಳಲ್ಲಿ ಉಂಟಾಗುವ ಸಮಸ್ಯೆಗಳ ಬಗ್ಗೆ

ದೂರುಗಳನ್ನು ನೀಡುವ ಕುರಿತು ಬೋರ್ಡ್ ಮತ್ತು ದೂರವಾಣಿ ಸಂಖ್ಯೆ ಅಳವಡಿಸಲು ತೀರ್ಮಾನಿಸಲಾಗಿತ್ತು ಈ ಸಂಬಂಧ ತೆಗೆದುಕೊಂಡಿರುವ ಕ್ರಮವೇನೆಂದು ಕೇಳಿದರು.

- ಶ್ರೀ ನಾಗರಾಜು ಸಿ. ರವರು ಮಾತನಾಡಿ, ಪುಟ ಸಂಖ್ಯೆ 18ರಲ್ಲಿ ಮಾನಸಗಂಗೋತ್ರಿಯ ಅಧ್ಯಯನ ವಿಭಾಗದಲ್ಲಿ ನಿವೃತ್ತಿ ಹೊಂದಿರುವ ಅಧ್ಯಾಪಕರು ವಿಭಾಗದ ಕೊಠಡಿಯನ್ನು ತೆರವುಗೊಳಿಸಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.
- ಕುಲಸಚಿವರು ಮಾತನಾಡಿ, ನಾವು ಎಲ್ಲಾ ವಿಭಾಗಗಳ ಅಧ್ಯಕ್ಷರುಗಳಿಗೆ ನಿವೃತ್ತಿ ಹೊಂದಿರುವ ಅಧ್ಯಾಪಕರು ಕೊಠಡಿಯನ್ನು ತೆರವುಗೊಳಿಸುವಂತೆ ಸೂಚಿಸಲು ಪತ್ರ ಬರೆಯಲಾಗಿದ್ದು, ಆಯಾಯ ಅಧ್ಯಯನ ವಿಭಾಗಳಿಂದ ಬಂದಿರುವ ಪತ್ರಕ್ಕೆ ಕೊಠಡಿಯನ್ನು ತೆರವುಗೊಳಿಸಲು ಕ್ರಮವಹಿಸಲಾಗಿರುತ್ತದೆ. ಉಳಿದಂತೆ ಕೊಠಡಿಯನ್ನು ತೆರವುಗೊಳಿಸದ ನಿವೃತ್ತ ಪ್ರಾಧ್ಯಾಪಕರುಗಳಿಗೆ ನೋಟಿಸ್ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನಿವೃತ್ತಿ ಹೊಂದಿರುವ ಅಧ್ಯಾಪಕರುಗಳ ಕೊಠಡಿಯನ್ನು ತೆರವುಗೊಳಿಸುವಂತೆ ಅಧ್ಯಯನ ವಿಭಾಗದ ಅಧ್ಯಕ್ಷರುಗಳಿಗೆ ಈಗಾಗಲೇ ಪತ್ರ ರವಾನಿಸಿ, ಅಗತ್ಯ ಕ್ರಮವಹಿಸುವಂತೆ ತಿಳಿಸಲಾಗಿದೆ. ಆದರೂ ಸಹ ಕೆಲವು ಅಧ್ಯಯನ ವಿಭಾಗದ ಅಧ್ಯಕ್ಷರು ಈ ಸಂಬಂಧ ಅಗತ್ಯ ಕ್ರಮವಹಿಸಿರುವುದಿಲ್ಲ. ಅಂತಹ ಅಧ್ಯಯನ ವಿಭಾಗದ ಅಧ್ಯಕ್ಷರುಗಳ ವೇತನ ಕಡಿತಕ್ಕೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

| | |
|---|---|
| **ತೀರ್ಮಾನ** | **ದಿನಾಂಕ 09-10-2025ರಂದು ಜರುಗಿದ "ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು.** |
| ಸಾಮಾನ್ಯ ಸಭೆ 2025/7.1 | Retirement of Post-Graduate Teachers during the Calender Year-2026 |
| **ತೀರ್ಮಾನ** | **The Syndicate has approved to permit the Post-Graduate Teachers to retire from the University Service who have attained the age of Superannuation or continue the service of such teachers till the end of the academic year as per provisions under clause (3) of the Mysore University Employees (conditions of service) Statutes 1984, if they found physically fit and otherwise suitable, on re-employment basis on contractual basis, till the end of the respective semesters based on the recommendations of the Department Council.** |
| ಸಾಮಾನ್ಯ ಸಭೆ 2025/7.2 | Retirement of Teachers of Constituent Colleges During the Calendar year-2026. |
| **ತೀರ್ಮಾನ** | **The Syndicate has approved to permit the teachers to retire from the University Service who have attained the age of Superannuation.** |
| ಸಾಮಾನ್ಯ ಸಭೆ 2025/7.3 | ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿರುವ ಬಗ್ಗೆ- ಅನುಸಮರ್ಥನೆಗಾಗಿ |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ಪ್ರಕಾರ ಡಾ. ವಿ. ಶೋಭಾ, ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ,** |

| | |
|---|---|
| | **ಮಾನಸಗಂಗೋತ್ರಿ ಇವರನ್ನು ದಿನಾಂಕ: 3.11.025 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2025/7.4 | ಮಹಾರಾಜ ರೀಸರ್ಚ್ ಫೌಂಡೇಷನ್, ಮೈಸೂರು, ಎಂ.ಐ.ಟಿ. ಕ್ಯಾಂಪಸ್, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ ಇವರು ಪಿಎಚ್.ಡಿ. ಸಂಶೋಧನೆ ನಡೆಸಲು ಕೋರಿರುವ ಹೆಚ್ಚುವರಿ ವಿಷಯಗಳ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| **ತೀರ್ಮಾನ** | **ಮಹಾರಾಜ ರೀಸರ್ಚ್ ಫೌಂಡೇಷನ್, ಮೈಸೂರು, ಎಂ.ಐ.ಟಿ. ಕ್ಯಾಂಪಸ್, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ ಇವರಿಗೆ ಹೆಚ್ಚುವರಿಯಾಗಿ ಕನ್ನಡ ಮತ್ತು ವಾಣಿಜ್ಯ ವಿಷಯಗಳಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ಪರಿವೀಕ್ಷಣಾ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/7.5 | ಮೈಸೂರು ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಮತ್ತು ಪಾಕಶಾಲೆ, SPL Plot # 5, Horizon HIEMA Convention Centre Road, ಹೆಬ್ಬಾಳ್ ಇಂಡಸ್ಟ್ರೀಯಲ್ ಎಸ್ಟೇಟ್, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ Diploma in Hospitality & Hotel Management, Diploma in Culinary Arts ಮತ್ತು Diploma in Bakery & Pastry ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | **ಮೈಸೂರು ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಮತ್ತು ಪಾಕಶಾಲೆ, SPL Plot # 5, Horizon HIEMA Convention Centre Road, ಹೆಬ್ಬಾಳ್ ಇಂಡಸ್ಟ್ರೀಯಲ್ ಎಸ್ಟೇಟ್, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ Diploma in Hospitality & Hotel Management, Diploma in Culinary Arts ಮತ್ತು Diploma in Bakery & Pastry ಕೋರ್ಸ್‌ಗಳನ್ನು 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2025-26ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಮಾನ್ಯತೆ ನೀಡುವ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/7.6** | ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಇಲ್ಲಿ ಸ್ಥಾಪಿಸಲಾಗಿರುವ ಶ್ರೀ ಡಿ. ದೇವರಾಜ ಅರಸು ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ ಶ್ರೀ ಡಿ. ದೇವರಾಜ ಅರಸು ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಅಧ್ಯಯನ ಮಂಡಳಿಯು ಡಾ. ಎ.ಆರ್. ಶ್ರೀನಾಥ್, ನಿವೃತ್ತ ನಿರ್ದೇಶಕರು, ಎನ್‌ಸಿಯುಐ, ಬೆಂಗಳೂರು ಇವರ ಹೆಸರನ್ನು ಶಿಫಾರಸ್ಸು ಮಾಡಿದ್ದು, ಅದರಂತೆ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅಧ್ಯಯನ ಪೀಠದಲ್ಲಿ ಡಾ. ಎ.ಆರ್. ಶ್ರೀನಾಥ್, ನಿವೃತ್ತ ನಿರ್ದೇಶಕರು, ಇವರು ಈಗಾಗಲೇ ಸಂದರ್ಶಕ |

| | |
|---|---|
| | ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಮತ್ತೊಂದು ಅವಧಿಗೆ ಶ್ರೀಯುತರನ್ನೇ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ಮಂಡಳಿಯಲ್ಲಿ ಅನುಮೋದಿಸಿದ್ದು, ಈ ಹಿನ್ನೆಲೆಯಲ್ಲಿ ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಶಿಫಾರಸ್ಸು ಮಾಡಿರುವ ಡಾ. ಎಂ. ಲಿಂಗರಾಜು, ನಿವೃತ್ತ ಪ್ರಾಧ್ಯಾಪಕರು, ಐಎಸ್‌ಇಸಿ, ಬೆಂಗಳೂರು ಇವರನ್ನು ಶ್ರೀ ಡಿ. ದೇವರಾಜ ಅರಸು ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಬಹುದೆಂದು ತಿಳಿಸುತ್ತಾ, ಡಾ. ಎಂ. ಲಿಂಗರಾಜು ಇವರು ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಲು ಅಸಮ್ಮತಿ ಸೂಚಿಸಿದ್ದಲ್ಲಿ ಡಾ. ಸಿದ್ಧಗಂಗಮ್ಮ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಬಹುದೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ 18 ಪೀಠಗಳು ಚಾಲ್ತಿಯಲ್ಲಿದ್ದು, ಹಲವಾರು ಪೀಠಗಳನ್ನು ಸುಮಾರು 20 ವರ್ಷಗಳ ಹಿಂದೆಯೇ ಸ್ಥಾಪಿಸಿದ್ದು, ಸರ್ಕಾರವು ಪೀಠಗಳನ್ನು ಸ್ಥಾಪಿಸಲು ನೀಡಿರುವ ಇಡುಗಂಟಿನ ಮೊತ್ತವು ಬಹಳ ಕಡಿಮೆ ಪ್ರಮಾಣದ ಮೊತ್ತವಾಗಿದ್ದು, ಪ್ರಸ್ತುತ ಸದರಿ ಮೊತ್ತಕ್ಕೆ ವಾರ್ಷಿಕ ಕ್ರೋಢೀಕೃತವಾಗುವ ಬಡ್ಡಿ ಮೊತ್ತ ಬಹಳ ಕಡಿಮೆಯಿರುವುದರಿಂದ ಸರ್ಕಾರಕ್ಕೆ ಈ ಸಂಬಂಧ ಪೀಠಗಳಿಗೆ ಹೆಚ್ಚಿನ ಅನುದಾನವನ್ನು ಒದಗಿಸುವಂತೆ ಕೋರಿ ಪತ್ರ ಬರೆಯುವುದರ ಸಂಬಂಧ ಕ್ರಮವಹಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.<br><br>ಡಾ. ಎಚ್.ಎಸ್. ನಟರಾಜು ಅವರು ಮಾತನಾಡಿ, ಒಂದು ಸಭೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ದಿವಂಗತ ಶ್ರೀ ಡಿ. ದೇವರಾಜು ಅರಸು ಅವರ ಹೆಸರಿನಲ್ಲಿ ಮರಣೋತ್ತರ ಡಾಕ್ಟೊರೇಟ್‌ನ್ನು ನೀಡಬೇಕು ಎಂಬುದರ ಬಗ್ಗೆ ಮಾತನಾಡಿರುತ್ತಾರೆ. ಆದ್ದರಿಂದ ದಿವಂಗತ ಶ್ರೀ ಡಿ. ದೇವರಾಜು ಅರಸು ಅವರಿಗೆ ನಮ್ಮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮರಣೋತ್ತರ ಡಾಕ್ಟೊರೇಟ್ ಪದವಿಯನ್ನು ನೀಡಲು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು. ಸದರಿ ವಿಷಯಕ್ಕೆ ಸಿಂಡಿಕೇಟ್ ಸದಸ್ಯರುಗಳು ದನಿಗೂಡಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ದಿವಂಗತ ಶ್ರೀ ಡಿ. ದೇವರಾಜು ಅರಸು ಅವರಿಗೆ ಮರಣೋತ್ತರ ಡಾಕ್ಟೊರೇಟ್‌ಅನ್ನು ನೀಡಲು ಅಧಿನಿಯಮದಲ್ಲಿ ಅವಕಾಶವಿದೆಯೇ ಎಂಬುದರ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. |
| **ತೀರ್ಮಾನ** | **ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಇಲ್ಲಿ ಸ್ಥಾಪಿಸಲಾಗಿರುವ ಶ್ರೀ ಡಿ. ದೇವರಾಜ ಅರಸು ಅಧ್ಯಯನ ಪೀಠಕ್ಕೆ ಡಾ. ಎಂ. ಲಿಂಗರಾಜು, ನಿವೃತ್ತ ಪ್ರಾಧ್ಯಾಪಕರು, ಐಎಸ್‌ಇಸಿ, ಬೆಂಗಳೂರು ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಹಾಗೂ ಶ್ರೀಯುತರು ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಲು ಅಸಮ್ಮತಿ ಸೂಚಿಸಿದ್ದಲ್ಲಿ ಡಾ. ಸಿದ್ಧಗಂಗಮ್ಮ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಬಹುದೆಂದು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/7.7** | ಯುಜಿಸಿ, ನವದೆಹಲಿ ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ 11ನೇ ಯೋಜನೆಯ Merged Schemes ಅಡಿಯಲ್ಲಿ ಬಿಡುಗಡೆಗೊಂಡ ಅನುದಾನದಲ್ಲಿ ಶೀರ್ಷಿಕೆವಾರು ಬಳಸಿಕೊಳ್ಳದೆ ಹಾಗೂ ಆಕ್ಷೇಪಿಸಿರುವ ಶೀರ್ಷಿಕೆಗಳಲ್ಲಿ ಮೊತ್ತಕ್ಕೆ ಬಂದಂತ ಬಡ್ಡಿಯೊಂದಿಗೆ ಹಿಂದಿರುಗಿಸುವ ಬಗ್ಗೆ. |

| | |
|---|---|
| | ಕುಲಸಚಿವರು ಮಾತನಾಡಿ,ಯುಜಿಸಿ, ನವದೆಹಲಿ ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ 11ನೇ ಯೋಜನೆಯ Merged Schemes ಅಡಿಯಲ್ಲಿ ಬಿಡುಗಡೆಗೊಂಡ ಅನುದಾನದಲ್ಲಿ ಶೀರ್ಷಿಕೆವಾರು ಬಳಸಿಕೊಳ್ಳದೆ ಹಾಗೂ ಆಕ್ಷೇಪಿಸಿರುವ ಶೀರ್ಷಿಕೆಗಳಲ್ಲಿ ಮೊತ್ತಕ್ಕೆ ಬಂದಂತ ಬಡ್ಡಿಯೊಂದಿಗೆ ಹಿಂದಿರುಗಿಸುವ ಬಗೆಗಿನ ವಿಷಯವನ್ನು ಸಭೆಯಲ್ಲಿ ಮಂಡಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಯುಜಿಸಿ, ನವದೆಹಲಿ ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ 11ನೇ ಪಂಚವಾರ್ಷಿಕ ಯೋಜನೆಯ Merged Schemes ಹಾಗೂ ಇತರೆ ಸ್ಕೀಂಗಳ ಅಡಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆಗೊಳಿಸಲಾಗಿದ್ದಂತಹ ಶೇ.50ರಷ್ಟು ಅನುದಾನದಲ್ಲಿ ಕೆಲವೊಂದು ಶೀರ್ಷಿಕೆಗಳಲ್ಲಿ ಸಂಪೂರ್ಣ ಅನುದಾನವನ್ನು ಸದರಿ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ಸದ್ಬಳಕೆ ಮಾಡಿಕೊಳ್ಳದೆ ಇರುವುದರಿಂದ ಬಾಕಿ ಉಳಿದಿರುವ ಅನುದಾನ ಹಾಗೂ ಕೆಲವೊಂದು ಶೀರ್ಷಿಕೆಗಳಲ್ಲಿ ಹೆಚ್ಚುವರಿಯಾಗಿ ವಿಶ್ವವಿದ್ಯಾನಿಲಯವು ಖರ್ಚು ಮಾಡಿದ್ದು, ಹಾಗೂ ವಿಶ್ವವಿದ್ಯಾನಿಲಯದ ಅತಿಥಿ ಗೃಹದ ನವೀಕರಣಕ್ಕೆ ಸಂಬಂಧಿಸಿದಂತೆ, ಯುಜಿಸಿಯವರಿಗೆ ನೀಡುವ ವಿವರಣೆಯಲ್ಲಿ 468 Sq.ft. ಎಂಬುದರ ಬದಲಾಗಿ 936 Sq.ft. ಎಂದು ತಪ್ಪಾಗಿ ವಿವರಣೆ ನೀಡಿರುವುದಕ್ಕೆ ಯುಜಿಸಿ, ನವದೆಹಲಿಯವರು ಆಕ್ಷೇಪ ವ್ಯಕ್ತಪಡಿಸಿದ್ದು, ಈ ಹಿನ್ನೆಲೆಯಲ್ಲಿ ಸದ್ಬಳಕೆಯಾಗದೆ ಉಳಿದಿರುವ ಮೊತ್ತಕ್ಕೆ ಕ್ರೋಢೀಕೃತವಾಗುವ ಬಡ್ಡಿ ಹಣದೊಂದಿಗೆ ರೂ. 1,53,01,700/-ಗಳನ್ನು ಯುಜಿಸಿ, ನವದೆಹಲಿಯವರಿಗೆ ಈಗಾಗಲೇ ಹಿಂದಿರುಗಿಸಲು ನಿರ್ದೇಶನ ನೀಡಿರುತ್ತಾರೆ. ಈ ಸಂಬಂಧ ಯುಜಿಸಿ ಅಧಿಕಾರಿಗಳೊಂದಿಗೆ ಹಲವಾರು ಬಾರಿ ಚರ್ಚಿಸಲಾಗಿದ್ದು, 11ನೇ ಯೋಜನೆಯಡಿ ಬಿಡುಗಡೆಗೊಂಡ ಅನುದಾನಕ್ಕೆ ಲೆಕ್ಕಹೊಂದಾಣಿಕೆಯಾಗಬೇಕಾಗಿರುತ್ತದೆ. ಇಲ್ಲವಾದಲ್ಲಿ ಯುಜಿಸಿಯಿಂದ ಎಲ್ಲಾ ರೀತಿಯ ಅನುದಾನವನ್ನು ಸ್ಥಗಿತಗೊಳಿಸಿಗುವುದು ಎಂದು ತಿಳಿಸಿರುತ್ತಾರೆ. ಸದರಿ ವಿಷಯವು ಸುಮಾರು 2015 ರಿಂದಲೂ ಯುಜಿಸಿಯಿಂದ ಪತ್ರಗಳು, ಮಿಂಚಂಚೆಗಳು ಬರುತ್ತಿವೆ. ಜೊತೆಗೆ ಸಾಮಾಜಿಕ ಒಳಗೊಳ್ಳುವಿಕೆ ಕೇಂದ್ರ (CSSI)ಕ್ಕೂ ಅನುದಾನವನ್ನು ತಾತ್ಕಾಲಿಕವಾಗಿ ಬಿಡುಗಡೆಗೊಳಿಸದೆ ತಡೆಹಿಡಿದಿರುತ್ತಾರೆ ಎಂಬ ಅಂಶವನ್ನು ಸಭೆಗೆ ತಿಳಿಸುತ್ತಾ, ಯುಜಿಸಿಯನ್ನು ಕೇಂದ್ರ ಸರ್ಕಾರವು ಸದ್ಯದಲ್ಲಿಯೇ Higher Research Councilಗೆ ವಿಲೀನಗೊಳಿಸುವ ಸಾಧ್ಯತೆಯಿರುವುದರಿಂದ, ಆದಷ್ಟು ಶೀಘ್ರವಾಗಿ ಎಲ್ಲಾ ಲೆಕ್ಕಗಳನ್ನು ಮುಕ್ತಾಯಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಜೊತೆಗೆ ವಿಶ್ವವಿದ್ಯಾನಿಲಯಕ್ಕೆ ಯುಜಿಸಿಯಿಂದ ಯಾವ ಅನುದಾನವನ್ನು ಹಂಚಿಕೆ ಮಾಡುತ್ತಿಲ್ಲವಾದ್ದರಿಂದ. ಈ ಲೆಕ್ಕ ಹೊಂದಾಣಿಕೆಯನ್ನು ಮುಕ್ತಾಯಗೊಳಿಸುವ ಹಿನ್ನೆಲೆಯಲ್ಲಿ ರೂ. 1,53,01,700/-ಗಳನ್ನು ಯುಜಿಸಿ, ನವದೆಹಲಿಗೆ ಹಿಂದಿರುಗಿಸಲಾಗಿದೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಪ್ರಸ್ತುತ ವಿಶ್ವವಿದ್ಯಾನಿಲಯವು ಯುಜಿಸಿ, ನವದೆಹಲಿಯವರಿಗೆ 11ನೇ ಯೋಜನೆಗೆ ಪಡೆದಿರುವ ಅನುದಾನಕ್ಕೆ ಬಡ್ಡಿಯನ್ನು ಸೇರಿಸಿ ನೀಡದಿದ್ದಲ್ಲಿ ಮುಂದೆ ಬಡ್ಡಿಯ ಮೊತ್ತವು ದೊಡ್ಡದಾಗುತ್ತದೆ. ಆದ್ದರಿಂದ ಸದರಿ ರೂ.1,53,01,700/-ಗಳನ್ನು ಯುಜಿಸಿಗೆ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದರು. |
| ತೀರ್ಮಾನ | **ಯುಜಿಸಿ, ನವದೆಹಲಿ ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ 11ನೇ ಯೋಜನೆಯ Merged Schemes ಅಡಿಯಲ್ಲಿ ಬಿಡುಗಡೆಗೊಂಡ ಅನುದಾನದಲ್ಲಿ ಶೀರ್ಷಿಕೆವಾರು ಬಳಸಿಕೊಳ್ಳದೆ** |

| | |
|---|---|
| | **ಹಾಗೂ ಆಕ್ಷೇಪಿಸಿರುವ ಶೀರ್ಷಿಕೆಗಳಲ್ಲಿ ಮೊತ್ತಕ್ಕೆ ಬಂದಂತ ಬಡ್ಡಿಯೊಂದಿಗೆ ಒಟ್ಟು ರೂ. 1,53,01,700/-ಗಳನ್ನು (ಒಂದು ಕೋಟಿ, ಐವತ್ಮೂರು ಲಕ್ಷದ ಒಂದು ಸಾವಿರದ ಏಳು ನೂರು ರೂ.ಗಳನ್ನು) ವಿಶ್ವವಿದ್ಯಾನಿಲಯದ ಎಸ್‌ಪಿಎಸ್ ಖಾತೆಯಿಂದ ಯುಜಿಸಿಗೆ ಪಾವತಿಸಲು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2025/7.8** | ಸಂಯೋಜನಾ ಶುಲ್ಕಪಟ್ಟಿಯನ್ನು ಪರಿಷ್ಕರಿಸಿ ಪ್ರಕಟಿಸಿರುವ ಸಂಬಂಧ ಅನುಸಮರ್ಥನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | **2025-26ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಹಾಗೂ ಇನ್ನಿತರೆ ಪ್ರೋಗ್ರಾಂಗಳ ಸಂಯೋಜನಾ ಶುಲ್ಕಪಟ್ಟಿಯನ್ನು ಪರಿಷ್ಕರಿಸಿ ಪ್ರಕಟಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2025/7.9** | ದಿನಾಂಕ: 05-08-2025ರಂದು ನಡೆದ ಕ್ರೀಡಾ ಸಮಿತಿಯ ನಡಾವಳಿಯನ್ನು ಅನುಮೋದಿಸುವ ಬಗೆಗೆ. |
| **ತೀರ್ಮಾನ** | **ದಿನಾಂಕ: 05.08.2025 ರಂದು ನಡೆದ ಕ್ರೀಡಾ ಸಮಿತಿಯ ನಡಾವಳಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/7.10 | **ಡಾ. ಎಂ.ಎಸ್. ಗೋವಿಂದೇಗೌಡ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ನಿರ್ದೇಶಕರಾಗಿ ನೇಮಕ ಮಾಡುವ ಬಗ್ಗೆ** |
| | ಡಾ. ಎಂ.ಎಸ್. ಗೋವಿಂದೇಗೌಡ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ನಿರ್ದೇಶಕರಾಗಿ ನೇಮಕ ಮಾಡುವ ಬಗೆಗಿನ ವಿಷಯವನ್ನು ಸಭೆಗೆ ಮಂಡಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಈ ಹಿಂದೆ ಡಾ. ಅನಂತಪದ್ಮನಾಭ ಅವರು ನಿರ್ದೇಶಕರಾಗಿದ್ದಂತಹ ಸಂದರ್ಭದಲ್ಲಿ ಇಂಜಿನಿಯರಿಂಗ್ ಕಾಲೇಜಿಗೆ ಸಿಂಡಿಕೇಟ್ ಸದಸ್ಯರುಗಳಾದ ನಾವುಗಳು ಭೇಟಿ ನೀಡಿದಂತಹ ವೇಳೆಯಲ್ಲಿ ಅಲ್ಲಿರುವ ಅವ್ಯವಸ್ಥೆಯನ್ನು ಕಂಡು ನಿರ್ದೇಶಕರೊಂದಿಗೆ ಮಾತನಾಡಿದಾಗ ಅವರು ತಮ್ಮ ತೊಂದರೆಗಳನ್ನು ಹೇಳಿಕೊಂಡಿದ್ದರು. ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿಬ್ಬಂದಿಗಳ ಕೊರತೆಯಿರುವುದರಿಂದ ಕೆಲಸವನ್ನು ಮಾಡಿಸಲು ಸಾಧ್ಯವಾಗುತ್ತಿಲ್ಲವೆಂದು ಹಾಗೂ ಇನ್ನಿತರೆ ತೊಂದರೆಗಳ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ಮಾನ್ಯ ಕುಲಪತಿಗಳೊಂದಿಗೆ ಇಂಜಿನಿಯರಿಂಗ್ ಕಾಲೇಜಿನ ಬಗ್ಗೆ ಮಾತನಾಡಿದಾಗ, ಎಲ್ಲಾ ಸವಲತ್ತುಗಳನ್ನೂ ನೀಡಿದ್ದಾಗ್ಯೂ ಸಹ ಅವರು ಸರಿಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲವಾದ್ದರಿಂದ ನಿರ್ದೇಶಕರನ್ನು ಬದಲಾವಣೆ ಮಾಡಬೇಕೆಂದು ತಿಳಿಸಿದ್ದರು. ಈ ನಿಟ್ಟಿನಲ್ಲಿ ಡಾ. ಎಂ.ಎಸ್. ಗೋವಿಂದೇಗೌಡರವರನ್ನು ಇಂಜಿನಿಯರಿಂಗ್ ಕಾಲೇಜಿನ ನಿರ್ದೇಶಕರನ್ನಾಗಿ ನೇಮಿಸಲಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಕಾಲೇಜಾಗಿರುವುದರಿಂದ ಸಾರ್ವಜನಿಕರಿಗೆ ಒಂದು ಒಳ್ಳೆಯ ಅಭಿಪ್ರಾಯವಿರುವುದರಿಂದ ತಮ್ಮ ಮಕ್ಕಳನ್ನು ನಮ್ಮ ಇಂಜಿನಿಯರಿಂಗ್ ಕಾಲೇಜಿಗೆ ಪ್ರವೇಶಾತಿ ಮಾಡಿಸುತ್ತಿದ್ದಾರೆ.<br><br>ಮುಂದುವರೆದು, ಡಾ. ಗೋವಿಂದೇಗೌಡರವರು ನಿರ್ದೇಶಕರಾಗಿ ಬಂದ ಮೇಲೆಯೂ ಸಹ ಯಾವುದೇ ಪರಿಣಾಮಕಾರಿ ರೀತಿಯ ಬದಲಾವಣೆ ಕಾಲೇಜಿನಲ್ಲಿ ಆಗಿರುವುದಿಲ್ಲ. ಜೊತೆಗೆ |

| | |
|---|---|
| | ಮೌಲ್ಯಮಾಪನ ವಿಷಯದಲ್ಲಿ ಕೆಲವೊಂದು ಘಟನೆ ನಡೆದಿರುವುದು ತಮ್ಮಗಳ ಗಮನಕ್ಕೂ ಬಂದಿದೆ. ಹಾಗೆಯೇ ಪ್ಲೇಸ್‌ಮೆಂಟ್ ದೊರಕದೆಯಿದ್ದಲ್ಲಿ ಯಾವುದೇ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಕಾಲೇಜಿಗೆ ಪ್ರವೇಶಾತಿ ಪಡೆಯಲು ಮುಂದೆ ಬರುವುದಿಲ್ಲ. ಇಂಜಿನಿಯರಿಂಗ್ ಕಾಲೇಜಿನ ಮರು ಮೌಲ್ಯಮಾಪನದ ಬಗೆಗಾಗಲೀ, ವಿದ್ಯಾರ್ಥಿಗಳಿಂದ ಮತ್ತು ಅಧ್ಯಾಪಕರಿಂದ ಇತರೆ ದೂರುಗಳು ಬಂದಿರುವುದನ್ನು ತಮ್ಮ ಗಮನಕ್ಕೆ ಈಗಾಗಲೇ ತರಲಾಗಿದೆ. ಆದ್ದರಿಂದ ಮುಂದೆ ಈ ರೀತಿಯ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನಿರ್ದೇಶಕರಿಗೆ ಸೂಚಿಸಬೇಕೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಸುಮಾರು 18 ಸಮಿತಿಗಳನ್ನು ರಚಿಸಿಕೊಂಡಿದ್ದು, ಆ ಸಮಿತಿಗಳಲ್ಲಿ ಅತಿಥಿ ಉಪನ್ಯಾಸಕರುಗಳೇ ಸದಸ್ಯರಾಗಿದ್ದಾರೆ. ಕಾಲೇಜಿನ ನಿರ್ದೇಶಕರಿಗೆ ಪ್ಲೇಸ್‌ಮೆಂಟ್ ಕಮಿಟಿ, ಇವೆಂಟ್ ಕಮಿಟಿ ಅಥವಾ ಇನ್ನಿತರ ಯಾವುದೇ ಕಮಿಟಿಗಳಿಗೆ ನುರಿತ ತಂತ್ರಜ್ಞಾನದ ಅರಿವುಳ್ಳವರನ್ನು, ಹಿರಿಯ ಪ್ರಾಧ್ಯಾಪಕರನ್ನು ಸದರಿ ಸಮಿತಿಗಳಿಗೆ ಸದಸ್ಯರನ್ನಾಗಿ ಮಾಡಿಕೊಂಡು, ತಿಂಗಳಿಗೊಮ್ಮೆ ಒಂದು ಸಭೆಯನ್ನು ಕರೆದು ಮುಂದೆ ಕೈಗೊಳ್ಳಬಹುದಾದಂತಹ ಕ್ರಮಗಳ ಬಗ್ಗೆ ಚರ್ಚಿಸುವುದರ ಬಗ್ಗೆ ಸಲಹೆ ನೀಡಿರುವುದಾಗಿ ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಸಿಎಸ್‌ಆರ್ ಫಂಡ್ ತರುವುದರ ಬಗ್ಗೆ ಸಮಿತಿ ರಚಿಸಿ, ನಮ್ಮ ಸಿಂಡಿಕೇಟ್ ಸದಸ್ಯರನ್ನು ಆ ಸಮಿತಿಯಲ್ಲಿ ಸದಸ್ಯರನ್ನಾಗಿ ಹಾಗೂ ಇಂಜಿನಿಯರಿಂಗ್ ಕಾಲೇಜಿನ ಸಮಿತಿಗಳಿಗೂ ಸದಸ್ಯರನ್ನಾಗಿ ನೇಮಿಸುವಂತೆ ಈಗಾಗಲೇ ಅಧ್ಯಕ್ಷರ ಬಳಿ ಸಾಕಷ್ಟು ಬಾರಿ ಚರ್ಚಿಸಲಾಗಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನ Board of Governance ಕಮಿಟಿಗೆ ನನ್ನ ಸದಸ್ಯರನ್ನಾಗಿ ನೇಮಿಸಿದ್ದಾರೆ. ಆದರೆ ಎರಡು ವರ್ಷಗಳಾದರೂ ಒಂದು ಸಭೆಯನ್ನು ನಡೆಸಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಕುಲಪತಿಗಳು ಮಾತನಾಡಿ, ಯುನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ Statute ಅನುಮೋದನೆಗೊಂಡಿರುವುದಿಲ್ಲ. Statute ಅನುಮೋದನೆಗೊಂಡ ನಂತರವೇ Board of Governance ಸಭೆಯನ್ನು ಕರೆಯಲು ಸಾಧ್ಯವಾಗುವುದೆಂದು ತಿಳಿಸುತ್ತಾ, Statuteಅನ್ನು ಉನ್ನತ ಶಿಕ್ಷಣ ಇಲಾಖೆಗೆ ಕಳುಹಿಸಲಾಗಿತ್ತು. ಅದರಲ್ಲಿ ಕೆಲವೊಂದನ್ನು ತಿದ್ದುಪಡಿಯಾಗಬೇಕೆಂದು ತಿಳಿಸಿರುವುದರಿಂದ, ಇಂದಿನ ಸಭೆಯಲ್ಲಿ ತಿದ್ದುಪಡಿ ಮಾಡಿರುವ Statuteಅನ್ನು ಸರ್ಕಾರಕ್ಕೆ ಕಳುಹಿಸಲು ಮಂಡಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಮಹದೇಶು ಅವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನ ಮೊದಲನೇ ಬ್ಯಾಚ್ ತಮ್ಮ ಪದವಿಯನ್ನು ಮುಗಿಸಿದ್ದಾರೆ. ಅವರಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ಲೇಸ್‌ಮೆಂಟ್ ದೊರೆತಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಕೇಳಿದರು.<br><br>ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಪತ್ರಿಕಾ ಮಾಧ್ಯಮದಲ್ಲಿ ಇಂಜಿನಿಯರಿಂಗ್ ಕಾಲೇಜಿನ ಫಲಿತಾಂಶವನ್ನು ಪ್ರಕಟಿಸಿಲ್ಲವೆಂಬುದರ ಬಗ್ಗೆ ವಿಷಯವು ಹರಿದಾಡಿತ್ತು. ಆದರೆ |

| | |
|---|---|
| | 8ನೇ ಸೆಮಿಸ್ಟರ್‌ನ ಫಲಿತಾಂಶವನ್ನು ನಾವು ಒಂದು ತಿಂಗಳ ಹಿಂದೆಯೇ ನೀಡಲಾಗಿರುವುದರ ಬಗ್ಗೆ ಸಭೆಯ ಗಮನಕ್ಕೆ ತರುತ್ತಾ, ಶೇಕಡ 20ರಷ್ಟು ವಿದ್ಯಾರ್ಥಿಗಳಿಗೆ ಪ್ಲೇಸ್‌ಮೆಂಟ್ ದೊರೆತಿರುವುದನ್ನು ಸಭೆಯ ಗಮನಕ್ಕೆ ತಂದರು. ಮುಂದಿನ ಬ್ಯಾಚ್ ವಿದ್ಯಾರ್ಥಿಗಳಿಗೆ ಉತ್ತಮ ಅಂಕಗಳನ್ನು ಗಳಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ತಯಾರು ಮಾಡುವ ಕೆಲಸ ಮಾಡಿ ಪ್ಲೇಸ್‌ಮೆಂಟ್‌ನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ದೊರಕುವಂತೆ ಕೆಲಸ ನಿರ್ವಹಿಸುವುದಾಗಿ ತಿಳಿಸಿದರು.<br><br>ಡಾ. ಹೆಚ್.ಎಸ್. ನಟರಾಜು ಅವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನ ಪ್ರಸ್ತುತ ನಿರ್ದೇಶಕರಿಗೆ ಗೌರವ ಸಂಭಾವನೆಯನ್ನು ನೀಡುತ್ತಿರುವ ಮೊತ್ತವೆಷ್ಟು? ಹಾಗೂ ಹಿಂದೆ ಇದ್ದಂತಹ ನಿರ್ದೇಶಕರಾದ ಡಾ. ಅನಂತಪದ್ಮನಾಭ ಅವರಿಗೆ ನೀಡುತ್ತಿದ್ದ ಗೌರವ ಸಂಭಾವನೆ ಎಷ್ಟು ಎಂಬುದರ ಬಗ್ಗೆ ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಹಿಂದೆ ಇದ್ದಂತಹ ನಿರ್ದೇಶಕರಿಗೆ ರೂ. 1,46,000/-ಗಳನ್ನು ನೀಡುತ್ತಿದ್ದು, ಪ್ರಸ್ತುತ ಇರುವ ನಿರ್ದೇಶಕರಿಗೆ ರೂ. 1,80,000/-ಗಳ ಗೌರವ ಸಂಭಾವನೆಯನ್ನು ನೀಡಲಾಗುತ್ತಿದ್ದು, ಬೇರೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಿರ್ದೇಶಕರುಗಳಿಗೆ ರೂ. 3.50 ಲಕ್ಷಗಳಿಗಿಂತ ಹೆಚ್ಚಿನ ವೇತನವನ್ನು ನೀಡಲಾಗುತ್ತಿದೆ ಎಂದು ತಿಳಿಸುತ್ತಾ, ಇಂಜಿನಿಯರಿಂಗ್ ಕಾಲೇಜಿನ ನಿರ್ದೇಶಕರು ನೇರವಾಗಿ ಪತ್ರಿಕಾ ಹೇಳಿಕೆಯನ್ನು ನೀಡಿರುತ್ತಾರೆ. ಆದ್ದರಿಂದ ಅವರನ್ನು ಕರೆದು ಮಾತನಾಡಿದ್ದು, ಯಾವುದೇ ಸಮಸ್ಯೆಗಳು ಇದ್ದಲ್ಲಿ ಮೊದಲು ನಮ್ಮೊಂದಿಗೆ ಚರ್ಚಿಸುವಂತೆ ಡಾ. ಎಂ.ಎಸ್. ಗೋವಿಂದೇಗೌಡ ಇವರಿಗೆ ನೇರವಾಗಿ ಪತ್ರಿಕಾ ಹೇಳಿಕೆಯನ್ನು ನೀಡಬಾರದೆಂಬುದರ ಬಗ್ಗೆ ಹಾಗೂ ಕಾಲೇಜಿನಲ್ಲಿ ಶಿಸ್ತನ್ನು ಕಾಪಾಡಿಕೊಳ್ಳುವಂತೆ ನೋಟಿಸ್ ನೀಡುವಂತೆ ಕುಲಸಚಿವರಿಗೆ ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಈಗಾಗಲೇ ಇಂಜಿನಿಯರಿಂಗ್ ಕಾಲೇಜಿನ ನಿರ್ದೇಶಕರೊಂದಿಗೆ ಕಾಲೇಜಿನ ವಿಷಯವಾಗಿ ಮಾತನಾಡಿದ ಸಂದರ್ಭದಲ್ಲಿ ಇನ್ನು ಎರಡು ತಿಂಗಳ ಸಮಯಾವಕಾಶ ನೀಡಿದರೆ, ಎಲ್ಲಾ ವ್ಯವಸ್ಥೆಗಳನ್ನು ಸರಿಪಡಿಸಿಕೊಳ್ಳಲಾಗುವುದು ಎಂದು ತಿಳಿಸಿದ್ದರು. ಆದರೆ ಒಂದು ವರ್ಷಗಳೇ ಕಳೆದರೂ ಯಾವುದೇ ಕ್ರಮವನ್ನೂ ಕೈಗೊಂಡಿರುವುದಿಲ್ಲ. ಜೊತೆಗೆ ಅವರು ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಯವೈಖರಿಗೂ ಇಲ್ಲಿ ನಡೆಸುತ್ತಿರುವ ಕಾರ್ಯವೈಖರಿಗೂ ಅಜಗಜಾಂತರ ವ್ಯತ್ಯಾಸವಿದೆ. ಜೊತೆಗೆ ಇಂಜಿನಿಯರಿಂಗ್ ಕಾಲೇಜಿನ ಸಿಬ್ಬಂದಿಗಳು ಸರಿಯಾದ ವೇಳೆಯಲ್ಲಿ ಕಛೇರಿಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲ. ಇದೆಲ್ಲವನ್ನೂ ಗಮನಿಸಿಯೂ ನಿರ್ದೇಶಕರವರು ಸುಮ್ಮನಿದ್ದಾರೆ. ಆದ್ದರಿಂದ ಅವರಿಗೆ ತಾವು ಕಾಲೇಜಿನ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವಂತೆ ನೋಟಿಸ್ ನೀಡಬೇಕೆಂದು ತಿಳಿಸಿದರು.<br><br>ಡಾ. ಪುಷ್ಪಾವತಿಯವರು ಮಾತನಾಡಿ, ಡಾ. ಎಂ.ಎಸ್. ಗೋವಿಂದೇಗೌಡರವರಿಗೆ ನಿರ್ದೇಶಕರಾಗಿ ಎಷ್ಟು ಅವಧಿಗಳವರೆಗೆ ಆದೇಶವನ್ನು ನೀಡಲಾಗಿದೆ ಎಂದು ಕೇಳಿದರು. ನಂತರ ಒಂದು ವರ್ಷಗಳ ಅವಧಿಗೆ ಅವರನ್ನು ನಿರ್ದೇಶಕರಾಗಿ ನೇಮಿಸಿದರೆ ಒಂದು ವರ್ಷಗಳವರೆಗೆ ಅವರು ಯಾವ ರೀತಿ ಕಾಲೇಜಿನಲ್ಲಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬುದರ ಬಗ್ಗೆ ಗಮನಹರಿಸಿದರೂ ಒಂದು ವರ್ಷಗಳ ತನಕ ಏನೂ |

| | |
|---|---|
| | ಮಾಡಲು ಸಾಧ್ಯವಾಗುವುದಿಲ್ಲ. ಜೊತೆಗೆ ಅಷ್ಟು ದೊಡ್ಡ ಮೊತ್ತದ ಗೌರವ ಸಂಭಾವನೆಯನ್ನು ನೀಡಿದಾಗ ಅವರು ವಿಶ್ವವಿದ್ಯಾನಿಲಯದ ಕಾಲೇಜಿನ ಏಳ್ಗೆಗಾಗಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಆದಕಾರಣ ಆರು ತಿಂಗಳವರಗೆ ನಿರ್ದೇಶಕರಾಗಿ ನೇಮಕ ಮಾಡಿದಾಗ ಅವರೂ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸುತ್ತಾರೆ ಎಂದು ತಿಳಿಸಿದರು.<br><br>ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಡಾ. ಎಂ.ಎಸ್. ಗೋವಿಂದೇಗೌಡರು ನಿರ್ದೇಶಕರಾಗಿ ಬಂದ ನಂತರ ಇಂಜಿನಿಯರಿಂಗ್ ಕಾಲೇಜಿನಿಂದ ರೂ. 10.00 ಕೋಟಿಗಳವರೆಗೆ ಶುಲ್ಕವನ್ನು ವಸೂಲಿ ಮಾಡಿರುತ್ತಾರೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನ ವಿಭಾಗದ ನಿರ್ದೇಶಕರು ಶೈಕ್ಷಣಿಕ ವಿಷಯವಾಗಿ ಹಲವಾರು ಬಾರಿ ಚರ್ಚಿಸಿದ್ದಾರೆ. ಆದರೆ ವಿಭಾಗದ ಆಂತರಿಕ ಸಮಸ್ಯೆಗಳ ಬಗ್ಗೆ ಯಾವುದೇ ವಿಷಯವನ್ನು ಇದುವರೆವಿಗೂ ಚರ್ಚಿಸಿರುವುದಿಲ್ಲ. ಹಾಗೆಯೇ ಇತರೆ ವಿಭಾಗಗಳಲ್ಲಿ ಸಿಬ್ಬಂದಿಗಳು ಕಛೇರಿಗೆ ತಡವಾಗಿ ಬರುವುದರ ಬಗ್ಗೆಯಾಗಲೀ, ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸದಿರುವುದರ ಬಗ್ಗೆಯಾಗಲಿ ವಿಭಾಗದ ಮುಖ್ಯಸ್ಥರು ಮಾಹಿತಿಯನ್ನೂ ನೀಡಿರುವುದಿಲ್ಲ ಎಂಬ ತಿಳಿಸಿದರು. |
| **ತೀರ್ಮಾನ** | **ಡಾ. ಎಂ.ಎಸ್. ಗೋವಿಂದೇಗೌಡ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ನಿರ್ದೇಶಕರಾಗಿ ನೇಮಕ ಮಾಡಿ ಹೊರಡಿಸಿರುವ ವಿವಿ ಆದೇಶವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2025/7.11 | 2025-26ನೇ ಶೈಕ್ಷಣಿಕ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಶಿಕ್ಷಕ ಸಲಹೆಗಾರರ ವತಿಯಿಚಿದ ಕಲ್ಪಿಸಲಾಗುವ ಭೋಜನ ವ್ಯವಸ್ಥೆಗೆ ಅಗತ್ಯವಾದ 1) 76 ದಿನಸಿ ಪದಾರ್ಥಗಳನ್ನು, 2) 52 ಆಹಾರ ಮತ್ತು 53 ಹೆಲ್ಪರ್ಸ್‌ಗಳ ಸೇವೆಯನ್ನು ಪಡೆಯಲು ಕೆಟಿಪಿಪಿ ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಲು ಮೂರು ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಿ ಟೆಂಡರ್‌ದಾರರುಗಳನ್ನು ಆಯ್ಕೆ ಮಾಡಿ, ನಿರ್ವಹಿಸಲಾಗುತ್ತಿರುವ ಬಗ್ಗೆ.- ಅನುಸಮರ್ಥನೆಗಾಗಿ |
| | ಕುಲಸಚಿವರು ಮಾತನಾಡಿ, 2025-26ನೇ ಶೈಕ್ಷಣಿಕ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿ ನಿಲಯಗಳಲ್ಲಿನ ನಿಲಯವಾಸಿಗಳಿಗೆ ಶಿಕ್ಷಕ ಸಲಹೆಗಾರರ ವತಿಯಿಂದ ಕಲ್ಪಿಸಲಾಗುವ ಭೋಜನ ವ್ಯವಸ್ಥೆಗೆ ಸಂಬಂಧಿಸಿದಂತೆ ಟೆಂಡರ್‌ನ್ನು ಕರೆಯಲಾಗಿದೆ. ಪ್ರತಿ ವರ್ಷ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು 2 ತಿಂಗಳ ಸಮಯವಾಗುತ್ತಿತ್ತು. ಆದರೆ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ 20 ದಿನಗಳಲ್ಲೇ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಟೆಂಡರ್ ಕರೆದು ವ್ಯವಸ್ಥೆ ಮಾಡಿ ಹಾಸ್ಟೆಲ್‌ಗಳನ್ನು ಪ್ರಾರಂಭಿಸಲಾಗಿದೆ ಎಂಬ ಅಂಶವನ್ನು ತಿಳಿಸುತ್ತಾ, ಸದರಿ ವಿಷಯದ ಬಗ್ಗೆ ಏನಾದರೂ ವಿಷಯವಿದ್ದಲ್ಲಿ ಮಾತನಾಡಬಹುದು ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಟೆಂಡರ್ ಬಗ್ಗೆ ಸವಿಸ್ತಾರವಾಗಿ ಮಾತನಾಡುತ್ತಾ, ಮೊದಲು ಟೆಂಡರ್ ಕರೆದಾಗಿನಿಂದ ನಡೆದಂತಹ ವಿಷಯವನ್ನು ಸಭೆಯ ಗಮನಕ್ಕೆ ತಂದರು. ದಿನಾಂಕ: 15.05.2025 ರಂದು ಟೆಂಡರ್ ಕರೆದಾಗ ಅದರಲ್ಲಿ |

| | |
|---|---|
| | 1) ಮೆ. ಕೆ.ಎಸ್.ಸಿ.ಸಿ.ಎಫ್. (ಅ..), ಬೆಂಗಳೂರು (ಕರ್ನಾಟಕ ಸ್ಟೇಟ್ ಕೋ ಆಪರೇಟಿವ್ ಕನ್ಸ್ಯೂಮರ್ ಫೆಡರೇಷನ್ –ಜನತಾ ಬಜಾರ್) 2) ಎ.ಎಂ. ಟ್ರೇಡರ್ಸ್, ಚಾಮರಾಜನಗರ, ಹಾಗೂ 3) ಮೆ. ಅಭಿಷೇಕ್ ಟ್ರೇಡರ್ಸ್‌ನವರು ಟೆಂಡರ್‌ನಲ್ಲಿ ಭಾಗವಹಿಸಿದ್ದು, ಅದರಲ್ಲಿ ಕಡಿಮೆ ಬೆಲೆ ನಿಗಧಿಪಡಿಸಿದ್ದ L1-ಜನತಾ ಬಜಾರ್‌ನವರು ರೂ. 41,49,425-00ಗಳಿಗೆ ಆಯ್ಕೆಯಾಗಿರುತ್ತದೆ. ಟೆಂಡರ್ ಕರೆದಂತಹ ಸಂದರ್ಭದಲ್ಲಿ L2 ಆಗಿದ್ದ ಮೆ. ಎ.ಎಂ. ಟ್ರೇಡರ್ಸ್‌ನವರು ರೂ. 63,40,838/-ಗಳಗೂ ಶ್ರೀ ಅಭಿಷೇಕ್ ಟ್ರೇಡರ್ಸ್‌ನವರು 67,53,216/-ಗಳಿಗೆ ಟೆಂಡರ್‌ಅನ್ನು ಹಾಕಿರುತ್ತಾರೆ. ಆದರೆ ಜನತಾ ಬಜಾರ್‌ನ ಟೆಂಡರ್‌ನಲ್ಲಿ ಆಹಾರ ಪದಾರ್ಥಗಳಲ್ಲಿ ದರವನ್ನು ನೀಡುವ ಸಂದರ್ಭದಲ್ಲಿ ಒಂದು ಕ್ವಿಂಟಾಲ್ ಅಕ್ಕಿಗೆ ರೂ. 5,600/-ಗಳನ್ನು ನಿಗದಿಗೊಳಿಸಬೇಕಾದ್ದನ್ನು ಒಂದು ಕೆ.ಜಿ.ಗೆ ಎಂದು ಉಲ್ಲೇಖಿಸಿರು ವುದನ್ನೇ ತಪ್ಪು ಎಂದು ಎಲ್-1 ಆಗಿದ್ದ ಮೆ. ಕೆ.ಎಸ್‌ಸಿಸಿಎಫ್ (ಅ.), ಬೆಂಗಳೂರುರವರ ಟೆಂಡರ್‌ದಾರರಿಗೆ ಏಳು ದಿನಗಳ ಅವಧಿಯನ್ನು ನೀಡಿ LOA ನೀಡಿದ್ದರೂ ಅವರು ಸದರಿ ಟೆಂಡರ್‌ರವರು ತಿರಸ್ಕರಿಸಿದ್ದರಿಂದ, ದಿನಾಂಕ: 19.08.2025ರಂದು 07 ದಿವಸಗಳ ಅಲ್ಪಾವಧಿ ಮರು ಟೆಂಡರ್‌ಅನ್ನು ಕರೆದಿದ್ದು, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಮೆ. ಎ.ಎಂ. ಟ್ರೇಡರ್ಸ್ ಮತ್ತು ಮೆ. ಅಭಿಷೇಕ್ ಟ್ರೇಡರ್ಸ್‌ನವರು ಮಾತ್ರ ಟೆಂಡರ್‌ದಾರರಾಗಿ ಭಾಗವಹಿಸಿರುತ್ತಾರೆ. ಮೆ. ಎ.ಎಂ. ಟ್ರೇಡರ್ಸ್‌ನವರು ರೂ. 75,99,326.45ಕ್ಕೆ ಟೆಂಡರ್‌ನಲ್ಲಿ ನಮೂದಿಸಿರುತ್ತಾರೆ. ಆದರೆ ಮೆ. ಅಭಿಷೇಕ್ ಟ್ರೇಡರ್ಸ್‌ನವರು ಎಷ್ಟು ಮೊತ್ತಕ್ಕೆ ಟೆಂಡರ್‌ನಲ್ಲಿ ಭಾಗವಹಿಸಿದ್ದಾರೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡಿರುವುದಿಲ್ಲ. ನಾನು ಸ್ವತಃ ಇದರ ಬಗ್ಗೆ ಪದೇ ಪದೇ ಕೇಳಿದರೂ ಮಾಹಿತಿಯನ್ನು ನೀಡಿರುವುದಿಲ್ಲ. ಆದರೆ ಮೆ. ಅಭಿಷೇಕ್ ಟ್ರೇಡರ್ಸ್‌ನವರನ್ನು ತಾಂತ್ರಿಕ ಸಮಿತಿಯವರು Mandatory Criteriaಗಳನ್ನು ಪೂರೈಸದ ಕಾರಣ ಸದರಿಯವರನ್ನು ತಾಂತ್ರಿಕ ಬಿಡ್‌ನಿಂದ ಅನರ್ಹಗೊಳಿಸಲಾಗಿದೆ.<br><br>ಈ ಮೇಲಿನ ಅಂಶಗಳೆಲ್ಲವನ್ನು ಗಮನಿಸಿದಾಗ ಮೊದಲು ಟೆಂಡರ್‌ಅನ್ನು ಕರೆದಾಗ ಮೆ. ಎ.ಎಂ. ಟ್ರೇಡರ್ಸ್ ನವರು ನೀಡಿರುವ ಮೊತ್ತವು ದಿನಾಂಕ: 19.8.2025ರಂದು ಕರೆದ ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತವು ಸುಮಾರು ರೂ. 12 ಲಕ್ಷಗಳವರೆಗೆ ವ್ಯತ್ಯಾಸವಾಗುವುದರಿಂದ ಸದರಿ ವಿಷಯದ ಬಗ್ಗೆ ವಿಶ್ವವಿದ್ಯಾನಿಲಯದವರು ಟೆಂಡರ್‌ದಾರರನ್ನು ಯಾವ ಕಾರಣಕ್ಕಾಗಿ ಇಷ್ಟು ಮೊತ್ತದ ವ್ಯತ್ಯಾಸವಾಗಿರುವ ಬಗ್ಗೆ ಕೇಳಿರುವುದಿಲ್ಲವೆಂದು, ಹಾಗೂ ರೂ. 75.00 ಲಕ್ಷಗಳಿಗೆ ಕರೆದಿದ್ದ ಟೆಂಡರ್‌ಅನ್ನು ನೆಗೋಷಿಯೇಷನ್ ಮಾಡಿ ರೂ. 73.00 ಲಕ್ಷಗಳಿಗೆ ಮೊತ್ತವನ್ನು ಇಳಿಸಿರುವುದಾಗಿ ತಿಳಿಸಿರುತ್ತಾರೆ. 2023ರ ಹಿಂದಿನಿಂದಲೂ 81 ಆಹಾರ ಪದಾರ್ಥಗಳಿಗೆ ಟೆಂಡರ್‌ಅನ್ನು ಕರೆಯಲಾಗುತ್ತಿತ್ತು. ಆದರೆ ಈಗ 76 ಆಹಾರ ಪದಾರ್ಥಗಳಿಗೆ ಟೆಂಡರ್‌ಅನ್ನು ಕರೆದಿರುವುದರ ಜೊತೆಗೆ 5 ಪದಾರ್ಥಗಳನ್ನು ಕಡಿಮೆ ಮಾಡಿದ್ದಾಗ್ಯೂ ಸಹ ಸದರಿ ಟೆಂಡರ್‌ದಾರರಿಗೆ ರೂ. 12.00 ಲಕ್ಷಗಳವರೆಗೆ ಹೆಚ್ಚಿನ ಮೊತ್ತವನ್ನು ನೀಡಿರುವುದು ಏಕೆ ಎಂದು ಪ್ರಶ್ನಿಸಿದರು.<br><br>ಮುಂದುವರೆದು, ಈಗಾಗಲೇ ಟೆಂಡರ್‌ಅನ್ನು ಕರೆಯುವಾಗ Equivalent ಪದವನ್ನು ತೆಗೆದು ಹಾಕುವಂತೆ ತಿಳಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ Equivalent ಪದವನ್ನು ತೆಗೆದಿದ್ದಾಗ್ಯೂ ಸಹ ಕೆಲವು ಆಹಾರ ಪದಾರ್ಥಗಳಲ್ಲಿ ನಮೂದಾಗಿಲ್ಲದಿರುವುದನ್ನು |

| | |
|---|---|
| | ನೀಡಿರುವುದು ಹಾಗೂ ಪದಾರ್ಥಗಳ ಬೆಲೆಯಲ್ಲಿ ವ್ಯತ್ಯಾಸವಾಗಿರುವುದನ್ನು ಸಹ ಸಭೆಯ ಗಮನಕ್ಕೆ ತರುತ್ತಾ, ಸದರಿ ವಿಷಯದ ಬಗ್ಗೆ ಸುದೀರ್ಘವಾಗಿ ಮಂಡಿಸುತ್ತಾ, ಮೆ. ಅಭಿಷೇಕ್ ಟ್ರೇಡರ್ಸ್‌ನವರು ಸುಮಾರು ಐದು ವರ್ಷಗಳಿಂದಲೂ ಸಹ ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ. ಆದರೆ ಅವರಿಗೆ ಫೈನಾನ್ಷಿಯಲ್ ಬಿಡ್‌ನಲ್ಲಿ ತಿರಸ್ಕರಿಸುತ್ತಿದ್ದರು. ಆದರೆ ಮೊದಲಬಾರಿ ತಾಂತ್ರಿಕ ಬಿಡ್‌ನಲ್ಲಿ ತಿರಸ್ಕೃತರಾಗಿರುವುದಕ್ಕೆ ಕಾರಣವೇನು ಎಂಬ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ, ಸದರಿ ಟೆಂಡರ್‌ನಲ್ಲಿ ಕೆಲವು ಲೋಪದೋಷಗಳಿರುವುದರಿಂದ ಸದರಿ ಟೆಂಡರ್‌ಅನ್ನು ರದ್ದುಪಡಿಸಿ, ಅಲ್ಪಾವಧಿ ಟೆಂಡರ್‌ಅನ್ನು ಕರೆಯಬಹುದೆಂದು ತಿಳಿಸುತ್ತಾ, ಜನತಾ ಬಜಾರ್‌ನವರು ರೂ. 41.00 ಲಕ್ಷಗಳಿಗೆ ಟೆಂಡರ್‌ನ ಮೊತ್ತವನ್ನು ನಮೂದಿಸಿದ್ದರಿಂದ ಹಾಗೂ ಅಕ್ಕಿ ಬೆಲೆಯನ್ನು ಸರಿಯಾಗಿ ನಮೂದಿಸಿದ್ದರೆ ರೂ. 20.00 ಲಕ್ಷಗಳವರೆಗೆ ಹಣವನ್ನು ವಿಶ್ವವಿದ್ಯಾನಿಲಯಕ್ಕೆ ಉಳಿಸಬಹುದಿತ್ತೆಂದು ತಿಳಿಸಿದರು. ಹಾಗೆಯೇ ಮೆ. ಹೀರಾ ಟ್ರೇಡರ್ಸ್ ಎಂಬುವವರಿಂದ ಪದಾರ್ಥಗಳ ಬೆಲೆಯನ್ನು ತರಿಸಲಾಗಿದೆ. ಆದರೆ ಇವರೊಬ್ಬರಿಂದ ತರಿಸಿರುವ ಪದಾರ್ಥಗಳ ಬೆಲೆಯ ಆಧಾರದ ಮೇಲೆ ಬೆಲೆಯನ್ನು ನಿಗದಿಪಡಿಸಬಹುದೇ ಎಂದು ಕೇಳುತ್ತಾ, ಯಾವ ಮಾನದಂಡದ ಮೇಲೆ ಪದಾರ್ಥಗಳ ಬೆಲೆಯನ್ನು ನಿಗಧಿಪಡಿಸಲಾಗಿದೆ ಎಂದು ಕೇಳಿದರು. ಆದ್ದರಿಂದ ಸದರಿ ಟೆಂಡರ್ ಪಾರದರ್ಶಕತೆಯಿಂದ ಕೂಡಿರುವುದಿಲ್ಲ ಎಂಬ ವಿಚಾರ ಬರುತ್ತದೆ ಎಂದು ತಿಳಿಸುತ್ತಾ, ಸದರಿ ಟೆಂಡರ್‌ಅನ್ನು ರದ್ದುಗೊಳಿಸಿ, ಮರು ಅಲ್ಪಾವಧಿ ಟೆಂಡರ್ ಅನ್ನು ಕರೆದು ಸಮರ್ಪಕವಾದ, ಉತ್ತಮವಾದ ಆಹಾರ ಪದಾರ್ಥಗಳನ್ನು ಖರೀದಿಸಲು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.<br><br>ಮುಂದುವರೆದು, ಸಿಂಡಿಕೇಟ್ ಸದಸ್ಯರುಗಳಾದ ನಾವುಗಳು ಹಾಸ್ಟೆಲ್‌ಗೆ ಹೋಗಿ ಖುದ್ದು ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿದ್ದಂತಹ ಪದಾರ್ಥಗಳು ಟೆಂಡರ್‌ದಾರರು ನೀಡಿರುವಂತಹ ಪದಾರ್ಥಗಳಲ್ಲಿ ವ್ಯತ್ಯಾಸವಿದೆ, ಜೊತೆಗೆ ಆಹಾರ ಪದಾರ್ಥಗಳ (Expiry) ಅವಧಿಯು ಮುಗಿದಿರುವುದನ್ನು ನಾವು ಖುದ್ದಾಗಿ ಪರಿಶೀಲಿಸಿದ್ದೇವೆ. ಪರಿಶೀಲಿಸುವ ವೇಳೆಯಲ್ಲಿ ತೆಗೆದಂತಹ ವಿಡಿಯೋ/ಛಾಯಾಚಿತ್ರಗಳನ್ನು ಮಾನ್ಯ ಕುಲಪತಿಗಳ ಸಮ್ಮುಖದಲ್ಲಿ ಸಭೆಯ ಗಮನಕ್ಕೆ ತರುತ್ತಾ, ಒಂದು ತಿಂಗಳಲ್ಲೇ ಆಹಾರ ಪದಾರ್ಥಗಳ (Expiry) ಗುಣಮಟ್ಟದ ಅವಧಿಯು ಮುಗಿದಿದ್ದರೂ ಸಹ ಆ ಪದಾರ್ಥಗಳಲ್ಲೇ ಅಡುಗೆ ಮಾಡಿ ವಿದ್ಯಾರ್ಥಿಗಳಿಗೆ ನೀಡಿದರೆ ವಿದ್ಯಾರ್ಥಿಗಳ ಆರೋಗ್ಯವು ಏನಾಗಬಹುದು? ಜೊತೆಗೆ ಟೆಂಡರ್‌ದಾರರು ನೀಡಿರುವ ಆಹಾರ ಪದಾರ್ಥಗಳ ಪಟ್ಟಿಯಲ್ಲಿ ನಮೂದಿಸದೇ ಇರುವ ಬೇರೆ ಹೆಸರಿನಲ್ಲಿರುವ ಪದಾರ್ಥಗಳನ್ನು ನೀಡಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು. ಜೊತೆಗೆ ಟೆಂಡರ್ ಕರೆಯುವಾಗ ಕುಲಪತಿಗಳು ಹಾಗೂ ಕುಲಸಚಿವರು ತಮ್ಮಗಳ ಲೋಪವಿಲ್ಲದಿರುವುದು ಕಂಡುಬಂದಿದ್ದು, ತಮ್ಮಗಳ ದಿಕ್ಕು ತಪ್ಪಿಸಿ, ತಮ್ಮ ಕೆಳ ಅಧಿಕಾರಿಗಳು ಈ ಕೃತ್ಯವನ್ನೆಸಗಿರಬಹುದು. ಜೊತೆಗೆ ಅಲ್ಪಾವಧಿ ಟೆಂಡರ್‌ಅನ್ನು ಕರೆಯುವಾಗ ಕೆಲವೊಂದು ಅವ್ಯವಹಾರವನ್ನು ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ನಾವು ಏಳು ಜನ ಸಿಂಡಿಕೇಟ್ ಸದಸ್ಯರುಗಳು ಸದರಿ ಟೆಂಡರ್‌ಅನ್ನು ಹಿಂಪಡೆದು, ಬೇರೆ ಅಲ್ಪಾವಧಿ ಟೆಂಡರ್‌ಅನ್ನು ಕರೆಯಬೇಕೆಂದು ತಿಳಿಸಿದರು.<br><br>ಶ್ರೀ ಮಾದೇಶ್ ರವರು ಮಾತನಾಡಿ, ಪ್ರತಿ ಬಾರಿಯು ದಿನಸಿ ಪದಾರ್ಥಗಳ ಟೆಂಡರ್ ಅವಧಿಯು ಮುಗಿಯುವುದು ಗೊತ್ತಿದ್ದರೂ ಸಹ ಎರಡು ತಿಂಗಳ ಬಳಿಕ ಟೆಂಡರ್‌ಅನ್ನು |

ಕರೆಯಲಾಗುತ್ತಿದೆ. ಜೊತೆಗೆ ಯಾರು ಟೆಂಡರ್‌ದಾರರಾಗಿರುತ್ತಾರೋ ಅವರಿಂದ ಬೇಡಿ ಪದಾರ್ಥಗಳನ್ನು ಪಡೆಯುವ ಪ್ರಕ್ರಿಯೆ ನಡೆಯುತ್ತಿರುವುದು ನಾವು ಸಿಂಡಿಕೇಟ್ ಸದಸ್ಯರಾಗಿದ್ದಾಗಿನಿಂದಲೂ ಕಂಡುಬರುತ್ತಿದೆ. ಆದ್ದರಿಂದ ಮುಂದೆ ಟೆಂಡರ್ ಅವಧಿ ಮುಗಿಯುವುದು ಮೊದಲೇ ಗೊತ್ತಾಗುವುದರಿಂದ ಎರಡು ತಿಂಗಳ ಮುಂಚೆಯೇ ಟೆಂಡರ್‌ಅನ್ನು ಕರೆಯುವುದು ಸೂಕ್ತವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಕೆಟಿಪಿಪಿ ಕಾಯ್ದೆ ಪ್ರಕಾರ ಪಾರದರ್ಶಕತೆಯ ಆಧಾರದ ಮೇಲೆ ಟೆಂಡರ್‌ಅನ್ನು ಕರೆಯಲಾಗಿರುತ್ತದೆ. ತಾವು ಪ್ರಸ್ತಾಪಿಸಿರುವ ಸುದೀರ್ಘ ಮಾಹಿತಿಯ ಬಗ್ಗೆ ಟೆಂಡರ್ ಆಹ್ವಾನ ಪ್ರಾಧಿಕಾರವೇ (Tender Inviting Authorities) ಟೆಂಡರ್ ಬಗೆಗೆ ಸ್ಪಷ್ಟ ಮಾಹಿತಿಯನ್ನು ನೀಡುತ್ತಾರೆ. ಟೆಂಡರ್‌ಗೆ ಅನುಮೋದನೆ ನೀಡುವಾಗ ಕೆಟಿಪಿಪಿ ಕಾಯ್ದೆ ಪ್ರಕಾರ ನಡೆದಿದೆಯೇ LOAನಲ್ಲಿ ಯಾರಿದ್ದಾರೆ, ಟೆಂಡರ್‌ನಲ್ಲಿ ಎಷ್ಟು ಮೊತ್ತವನ್ನು ನಿಗಧಿಪಡಿಸಿರುತ್ತಾರೆ ಎಂಬುದನ್ನು ಗಮನಿಸಲಾಗಿರುತ್ತದೆ. ಪಾರದರ್ಶಕತೆಯ ಆಧಾರದ ಮೇಲೆ ಎಲ್ಲಾ ಆಹಾರ ಪದಾರ್ಥಗಳ ಬೆಲೆಯನ್ನು ನಿಗಧಿ ಮಾಡಿ ಕರೆಯಲಾಗಿರುತ್ತದೆ. ಎಲ್ಲಾ ದರ ಹಾಗೂ ಇತರೆ ಮಾಹಿತಿಗಳನ್ನು ತಾಂತ್ರಿಕ ಸಮಿತಿ ಹಾಗೂ ಫೈನಾನ್ಷಿಯಲ್ ಸಮಿತಿಯವರು ನಿರ್ವಹಿಸಿರುತ್ತಾರೆ. ಟೆಂಡರ್ ಅಂಗೀಕಾರವನ್ನು ಮಾತ್ರ ನಾವು ಮಾಡಿರುತ್ತೇವೆ.

ಮುಂದುವರೆದು, ಟೆಂಡರ್ ಕರೆಯುವಂತಹ ಎಲ್ಲಾ ಪ್ರಕ್ರಿಯೆಗಳನ್ನು ಪಾರದರ್ಶಕವಾಗಿಯೇ ಮಾಡಿದ್ದು, ಅದರಲ್ಲಿ ದರ ಪ್ರಕಟಣೆ ಮಾಡಿದಾಗಲೇ ಯಾರು ಬೇಕಾದರೂ ಆಕ್ಷೇಪಣೆ ಮಾಡಬಹುದಿತ್ತು. ಟೆಂಡರ್ ಕರೆಯುವಾಗ ಟೆಂಡರ್‌ದಾರರೂ ಒಬ್ಬರಾಗಲಿ ಅಥವಾ ಹೆಚ್ಚಿನವರಾಗಲಿ ಭಾಗವಹಿಸಬಹುದು. ಅದನ್ನು ತಿರಸ್ಕೃತಗೊಳಿಸುವ ಅಧಿಕಾರ ತಾಂತ್ರಿಕ ಸಮಿತಿಯವರಿಗೆ ಬರುತ್ತದೆ, ಕುಲಸಚಿವರಾದ ನನಗಿರುವುದಿಲ್ಲವೆಂದು ನಮ್ಮಗಳ ಮಧ್ಯಪ್ರವೇಶಿಸುವಿಕೆಯೂ ಇರುವುದಿಲ್ಲವೆಂದು ತಿಳಿಸಿದರು. ಜೊತೆಗೆ ಟೆಂಡರ್‌ನಲ್ಲಿ, ದರ ಪ್ರಕಟಣೆ, ಟೆಂಡರ್ ನೋಟಿಫಿಕೇಷನ್ ಹಾಗೂ ಟೆಂಡರ್‌ಗೆ ಸಂಬಂಧಿಸಿದ ದಾಖಲಾತಿಗಳೆಲ್ಲವೂ ವೆಬ್‌ಸೈಟ್‌ನಲ್ಲಿ ದೊರಕುತ್ತದೆ. ಆ ಸಂದರ್ಭದಲ್ಲೇ ದರ ಸರಿಯಿಲ್ಲವೆಂದು ಆಕ್ಷೇಪಿಸಿದ್ದರೆ, ಅದರ ಬಗ್ಗೆ ಪರಿಶೀಲಿಸಬಹುದಾಗಿತ್ತು. ಆದರೆ ಟೆಂಡರ್ ದರದ ಬಗ್ಗೆಯಾಗಲಿ ಪದಾರ್ಥಗಳ ಬಗ್ಗೆಯಾಗಲೀ ಯಾವುದೇ ಆಕ್ಷೇಪಣೆ ಬಂದಿಲ್ಲವಾದ್ದರಿಂದ ಸದರಿ ಟೆಂಡರ್ ಸ್ವೀಕೃತವಾಗಿರುತ್ತದೆ ಎಂದು ತಿಳಿಸುತ್ತಾ, ತಾವು ಸಭೆಯಲ್ಲಿ ಚರ್ಚಿಸಿರುವ ವಿಷಯಗಳಿಗೆ ಟೆಂಡರ್‌ಅನ್ನು ಆಹ್ವಾನಿಸಿರುವವರೇ ಉತ್ತರಿಸಬೇಕಾಗಿರುತ್ತದೆ.

ಡಾ. ಜೆ. ಶಿಲ್ಪಾರವರು ಮಾತನಾಡಿ, ಹಾಸ್ಟೆಲ್‌ನಲ್ಲಿರುವಂತಹ ವಾರ್ಡನ್‌ರವರಾಗಲಿ, ಸೂಪರ್‌ವೈಸರ್‌ರವರಾಗಲಿ ಆಹಾರ ಪದಾರ್ಥಗಳನ್ನು ಪರಿಶೀಲಿಸಿ ತೆಗೆದುಕೊಳ್ಳ ಬೇಕಾಗುತ್ತದೆ. ಆದರೆ ಈ ನಿಟ್ಟಿನಲ್ಲಿ ಹಾಸ್ಟೆಲ್‌ನಲ್ಲಿರುವ ಅಧಿಕಾರಿಗಳಾಗಲಿ, ಸಿಬ್ಬಂದಿ ಗಳಾಗಲಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ಎಲ್ಲಾ ಹಾಸ್ಟೆಲ್‌ಗಳಿಗೂ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರು ಮೇಲಾಧಿಕಾರಿಯಾಗಿರುತ್ತಾರೆ. ಜೊತೆಗೆ ಅಧಿಕಾರಿ ವರ್ಗದವರಿದ್ದಾರೆ, ವಾರ್ಡನ್‌ಗಳಿದ್ದಾರೆ, ಸಿಬ್ಬಂದಿಗಳಿದ್ದಾರೆ. ಅವರುಗಳು ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿ

| | |
|---|---|
| | ಪದಾರ್ಥಗಳನ್ನು ಸ್ವೀಕರಿಸಿದ್ದರೆ ಈ ತೊಂದರೆಗಳು ಆಗುವುದಿಲ್ಲ. ವಿಶ್ವವಿದ್ಯಾನಿಲಯದ ಅಧಿಕಾರಿಗಳಾದ ನಾವು ಈ ಎಲ್ಲಾ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಆದಕಾರಣ ಹಾಸ್ಟೆಲ್‌ನಲ್ಲಿರುವಂತಹ ಅಧಿಕಾರಿಗಳೇ ನಿರ್ವಹಿಸಬೇಕು ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಟೆಂಡರ್ ಪ್ರಕ್ರಿಯೆಯು ಮುಗಿದು ಟೆಂಡರ್‌ದಾರರಿಗೆ LOA ನೀಡುವಾಗ ಷರತ್ತಿನಲ್ಲಿ ಕಳಪೆ ಮಟ್ಟದ ಪದಾರ್ಥಗಳನ್ನು ನೀಡಿದ್ದಲ್ಲಿ ಅದನ್ನು ಹಿಂದಕ್ಕೆ ಪಡೆದು, ತಕ್ಷಣ ಬೇರೆ ಪದಾರ್ಥಗಳನ್ನು ಟೆಂಡರ್‌ದಾರರು ನೀಡತಕ್ಕದ್ದು ಎಂದು ನಮೂದಿಸಿದ್ದೀರಿ. ಈ ರೀತಿ ಷರತ್ತನ್ನು ಹಾಕಿದಾಗ ಟೆಂಡರ್‌ದಾರರಿಗೆ ಅನುಕೂಲವಾಗುತ್ತದೆ. ಕಳಪೆ ಮಟ್ಟದ ಪದಾರ್ಥವನ್ನು ನಮ್ಮ ಅಧಿಕಾರಿಗಳು ಸರಿಯಾಗಿ ಪರಿಶೀಲಿಸದೆ ಇರುವುದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತದೆ. ಆದ್ದರಿಂದ ಈ ಷರತ್ತನ್ನು ಹಾಕುವ ಬದಲು ಕಳಪೆ ಪದಾರ್ಥವನ್ನು ಟೆಂಡರ್‌ದಾರರು ನೀಡಿದ್ದಲ್ಲಿ ಟೆಂಡರ್‌ಅನ್ನು ರದ್ದುಗೊಳಿಸಲಾಗುವುದು ಎಂದು ನಮೂದಿಸುವಂತೆ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಟೆಂಡರ್‌ಅನ್ನು ಕರೆಯುವಾಗ ಯಾವ ಷರತ್ತುಗಳನ್ನು ಮೊದಲಿನಿಂದಲೂ ಅಳವಡಿಸಿಕೊಂಡಿದ್ದಾರೋ ಅದೇ ಷರತ್ತುಗಳನ್ನು ಮುಂದುವರಿಸಿಕೊಂಡು ಬರಲಾಗುತ್ತಿದೆ. ಜೊತೆಗೆ ಟೆಂಡರ್ ಕರೆಯುವಾಗ ಯಾವುದೇ ಲೋಪದೋಷಗಳನ್ನೆಸಗಿರುವುದಿಲ್ಲ. ನೀವು ಕೇಳಿರುವಂತಹ ಅಷ್ಟು ಪ್ರಶ್ನೆಗಳಿಗೆ ಅವರಿಂದಲೇ ಉತ್ತರಿಸಲಾಗುವುದೆಂದು ತಿಳಿಸುತ್ತಾ, ಜೊತೆಗೆ ಪದಾರ್ಥಗಳ ಬಗ್ಗೆ ಆಯಾಯ ಹಾಸ್ಟೆಲ್‌ನವರೇ ಕೂಲಂಕಷವಾಗಿ ಪರಿಶೀಲಿಸಬೇಕಾಗುತ್ತದೆ. ಯಾವುದೇ ಆಕ್ಷೇಪಣೆ ತೊಂದರೆಗಳಿದ್ದಲ್ಲಿ ನಮಗೆ ವರದಿ ಮಾಡಿದರೆ, ಅದರ ಬಗ್ಗೆ ಕ್ರಮಕೈಗೊಳ್ಳಬಹುದು. ಆಹಾರ ಪದಾರ್ಥಗಳ ಬಗ್ಗೆ ಆಯಾಯ ವಾರ್ಡನ್ ಅವರು ನೀಡಿರುವಂತಹ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು. ಸದರಿ ಟೆಂಡರ್ ಬಗ್ಗೆ ತಮಗೆ ಒಪ್ಪಿಗೆಯಿಲ್ಲದಿದ್ದಲ್ಲಿ ರದ್ದುಗೊಳಿಸ ಬಹುದೆಂದು ತಿಳಿಸಿದರು. ಆಹಾರ ಪದಾರ್ಥಗಳ ಟೆಂಡರ್ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಯಿತು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಆಹಾರ ಪದಾರ್ಥಗಳನ್ನು ಪಡೆಯುವಾಗ, ಆಯಾಯ ಹಾಸ್ಟೆಲ್‌ಗಳ ವಾರ್ಡನ್‌ರವರೇ ಜವಾಬ್ದಾರರಾಗಿರುತ್ತಾರೆ. ಹಾಸ್ಟೆಲ್‌ನ ವಾರ್ಡನ್‌ರವರುಗಳಿಗೆ ಹೆಚ್ಚುವರಿ ವೇತನವನ್ನು ನೀಡುವುದರಿಂದ ಅವರುಗಳು ಯಾವುದೇ ನ್ಯೂನತೆಗಳು ಕಂಡುಬಂದರೂ ವಿಶ್ವವಿದ್ಯಾನಿಲಯಕ್ಕಾಗಲಿ, ವಿದ್ಯಾರ್ಥಿ ಕ್ಷೇಮಪಾಲನಾ ಕೇಂದ್ರದ ನಿರ್ದೇಶಕರ ಗಮನಕ್ಕಾಗಲಿ ತರಬೇಕು, ಆದರೆ ಇವರುಗಳು ಯಾರೂ ಸಹ ಈ ಕೆಲಸವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸದೇ ಇರುವುದಕ್ಕೆ ಸಮಸ್ಯೆ ಉಂಟಾಗಿದೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಈ ಹಿಂದೆಯೂ ಸಹ ಆಹಾರ ಪದಾರ್ಥಗಳ ಟೆಂಡರ್‌ಗೆ ಸಂಬಂಧಿಸಿದಂತೆ ಹಲವಾರು ಬಾರಿ ಚರ್ಚಿಸಿ, Equivalent ಎಂಬ ಪದವನ್ನು ತೆಗೆಯುವಂತೆ ಸೂಚಿಸಲಾಗಿತ್ತು. ಅದೇ ರೀತಿ ಮುಂದೆ ಕಳಪೆ ಗುಣಮಟ್ಟದ ಪದಾರ್ಥಗಳನ್ನು ನೀಡಿದ್ದಲ್ಲಿ ಅದನ್ನು ಹಿಂದಕ್ಕೆ ಪಡೆದು, ತಕ್ಷಣ ಬೇರೆ ಪದಾರ್ಥಗಳನ್ನು ಟೆಂಡರ್‌ದಾರರು ನೀಡತಕ್ಕದ್ದು ಎಂಬುದರ ಬದಲಾಗಿ ಕಳಪೆ ಮಟ್ಟದ ಪದಾರ್ಥಗಳನ್ನು ನೀಡಿದ್ದಲ್ಲಿ ಟೆಂಡರ್‌ಅನ್ನು ರದ್ದುಗೊಳಿಸಲಾಗುವುದು ಎಂಬುದಾಗಿ ನಮೂದಿಸಬೇಕೆಂದು ತಿಳಿಸಿದರು. |

ಕುಲಸಚಿವರು ಮಾತನಾಡಿ, ಸದರಿ ಟೆಂಡರ್ ಬಗ್ಗೆ ತಮ್ಮ ಆಕ್ಷೇಪಣೆಗಳಿದ್ದಲ್ಲಿ ಒಂದು ಸಭೆಯನ್ನು ಕರೆದು ಆ ಸಭೆಯಲ್ಲಿ ಟೆಂಡರ್ ಆಹ್ವಾನಿಸಿರುವ ಅಧಿಕಾರಿಗಳು ಮತ್ತು ತಾಂತ್ರಿಕ ಸಮಿತಿಯವರನ್ನು ಕರೆಯಿಸಿ ತಮ್ಮ ಆಕ್ಷೇಪಣೆಗಳಿಗೆ ಸರಿಯಾದ ಉತ್ತರವು ಸಿಗದಿದ್ದಲ್ಲಿ ಸದರಿ ಟೆಂಡರ್‌ಅನ್ನು ರದ್ದುಗೊಳಿಸಬಹುದೆಂದು ಮತ್ತೊಮ್ಮೆ ತಿಳಿಸುತ್ತಾ, ಸದರಿ ಟೆಂಡರ್‌ದಾರರನ್ನೇ ಮುಂದುವರೆಸಬೇಕೆಂಬುದಾಗಲಿ, ತಪ್ಪು ಮಾಡಿದ್ದರೂ ಸಹ ಅವರನ್ನೇ ಮುಂದುವರೆಸ ಬೇಕೆಂಬ ಅಭಿಲಾಷೆಯಿಲ್ಲವೆಂದು ತಿಳಿಸುತ್ತಾ, ವಾರ್ಡನ್‌ರವರು ಹಾಗೂ ಡೀನ್‌ರವರು ನೀಡಿರುವ ವರದಿಯಲ್ಲಿ ಹರಿಷಿನ ಪುಡಿಯ ಬಗ್ಗೆ ಬಿಟ್ಟು ಬೇರೆ ಯಾವುದೇ ಆಹಾರ ಪದಾರ್ಥಗಳ ಬಗ್ಗೆ ವರದಿ ಮಾಡದೇ ಇರುವುದರಿಂದ ಅವರುಗಳ ಸಮಕ್ಷಮದಲ್ಲೇ ಸಭೆಯನ್ನು ಕರೆದು ಮಾಹಿತಿಯನ್ನು ನೀಡಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಟೆಂಡರ್‌ದಾರರು ನೀಡಿರುವ ಆಹಾರ ಪದಾರ್ಥಗಳ ಪಟ್ಟಿಯಂತೆ ಒಂದೇ ಒಂದು ಪದಾರ್ಥ ತುಪ್ಪವನ್ನು ಮಾತ್ರ ಸರಿಯಾಗಿ ನೀಡಿದ್ದು, ಇನ್ನುಳಿದ ಯಾವುದೇ ಆಹಾರ ಪದಾರ್ಥಗಳು ಪಟ್ಟಿಯಲ್ಲಿರುವಂತಿಲ್ಲವೆಂದು ತಿಳಿಸುತ್ತಾ, ಸದರಿ ಟೆಂಡರ್ ಬಗ್ಗೆ ನಮಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಆದರೆ ನಾವೇ ಖುದ್ದಾಗಿ ಹಾಸ್ಟೆಲ್‌ಗಳಲ್ಲಿ ಆಹಾರ ಪದಾರ್ಥಗಳನ್ನು ಪರಿಶೀಲಿಸಿರುವುದರಿಂದ ಸದರಿ ವಿಷಯವು ಬೆಳಕಿಗೆ ಬಂದಿದೆ ಆದ್ದರಿಂದ ಸದರಿ ವಿಷಯವು ಸಾಬೀತಾದಲ್ಲಿ ಇಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಹಾಸ್ಟೆಲ್‌ಗಳಿಗೆ ಹೋಗಿ ಎಲ್ಲಾವನ್ನು ಪರಿಶೀಲಿಸುವ ಸಂದರ್ಭದಲ್ಲಿ ವಾರ್ಡನ್‌ರವರುಗಳಿಗೆ ಹಾಗೂ ಡೀನ್‌ರವರಿಗೆ ಬಂದು ಮಾಹಿತಿಯನ್ನು ನೀಡುವಂತೆ ತಿಳಿಸಿದರೂ ಯಾರೂ ಬರಲಿಲ್ಲವೆಂದು ಸಭೆಗೆ ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ಮೆ. ಕಾಂತಿ ಏಜೆನ್ಸಿನವರು ಅಡುಗೆಗೆ ಸಂಬಂಧಿಸಿದಂತೆ ಸಿಬ್ಬಂದಿಗಳನ್ನು 15, 16 ಮಂದಿಗಳನ್ನು ನಿಯೋಜಿಸಿರುವುದಾಗಿ ತಿಳಿಸಿರುತ್ತಾರೆ. ಆದರೆ ಹಾಸ್ಟೆಲ್‌ಗಳಿಗೆ ನಾವುಗಳು ಭೇಟಿ ನೀಡಿದ ಸಂದರ್ಭದಲ್ಲಿ ಕೇವಲ 4 ರಿಂದ 5 ಮಂದಿ ಮಾತ್ರ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿರುತ್ತಾರೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಟೆಂಡರ್ ಆಹ್ವಾನಿಸುವ ಮಾಹಿತಿಯನ್ನು ಟ್ರೆಂಡಿಂಗ್ ಇರುವಂತಹ ಪತ್ರಿಕೆಯಲ್ಲಿ ನೀಡಿದರೆ ಎಲ್ಲಾ ಸಾರ್ವಜನಿಕರಿಗೂ ತಲುಪುತ್ತದೆ. ಆದರೆ ಯಾವುದೋ ಹೆಚ್ಚು ಬಳಕೆಯಲ್ಲಿಯಿಲ್ಲದ ಪತ್ರಿಕೆಯಲ್ಲಿ ಟೆಂಡರ್ ಬಗ್ಗೆ ಜಾಹಿರಾತನ್ನು ಹಾಕಿದರೆ ಅದು ಹೇಗೆ ಸಾರ್ವಜನಿಕರಿಗೆ ತಲುಪುತ್ತದೆ ಎಂದು ಕೇಳಿದರು.

ಕುಲಪತಿಗಳು ಮಾತನಾಡಿ, ಯಾವ ಹಾಸ್ಟೆಲ್‌ಗಳಲ್ಲಿ ವಾರ್ಡನ್‌ರವರಾಗಲಿ ಅಥವಾ ಡೀನ್‌ರವರಾಗಲಿ ಯಾರು ಕೆಲಸಕ್ಕೆ ಬರುತ್ತಿಲ್ಲ, ಸರಿಯಾಗಿ ಬರುತ್ತಿದ್ದಾರೋ ಇಲ್ಲವೋ ಎಂಬುದರ ಬಗ್ಗೆ ಮಾಹಿತಿ ನೀಡಿದರೆ ನಾವು ಕ್ರಮಕ್ಕೈಗೊಳ್ಳಬಹುದು. ಆದರೆ ಇದರ ಬಗ್ಗೆ ಮಾಹಿತಿಯನ್ನು ಯಾರು ನೀಡುತ್ತಿಲ್ಲ. ಆದ್ದರಿಂದ ವಾರ್ಡನ್ ಹಾಗೂ ಇತರೆ ಸಿಬ್ಬಂದಿಗಳಲ್ಲಿ ಯಾರು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲವೋ ಅಂತವರನ್ನು ತೆಗೆದು ಬೇರೆಯವರನ್ನು ನಿಯೋಜಿಸುವಂತೆ ತಿಳಿಸಿದರು.

| | |
|---|---|
| | ಕುಲಸಚಿವರು ಮಾತನಾಡಿ, ಪ್ರತಿಯೊಂದು ಹಾಸ್ಟೆಲ್‌ನಲ್ಲಿ ಆಹಾರ ಪದಾರ್ಥಗಳನ್ನು ಪಡೆದು ಸಹಿ ಮಾಡಿರುವ ಪಟ್ಟಿಯ ಲಭ್ಯತೆಯಿದೆ ಎಂದು ತಿಳಿಸಿದರು.<br><br>ಸಿಂಡಿಕೇಟ್ ಸದಸ್ಯರುಗಳು ಹಾಸ್ಟೆಲ್‌ಗಳಿಗೆ ಖುದ್ದು ಭೇಟಿ ನೀಡಿದ ಸಂದರ್ಭದಲ್ಲಿ ವಾರ್ಡನ್‌ಗಳಾಗಿ ಸಿಬ್ಬಂದಿಗಳಾಗಲಿ ಇರಲಿಲ್ಲ. ಹಾಗೆಯೇ ಇದ್ದಂತಹವರಲ್ಲಿ ಯಾರೂ ಸಹ ಸರಿಯಾದ ಮಾಹಿತಿಯನ್ನು ನೀಡುತ್ತಿಲ್ಲ ಹಾಗೂ ಸಮರ್ಪಕವಾಗಿ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲವೆಂದು ಹಾಗೂ ಪದಾರ್ಥಗಳು ಬಂದಾಗ ಯಾವ ಪದಾರ್ಥ ಬಂದಿದೆ ಎಷ್ಟು ಬಂದಿದೆ, ಅದರ ಗುಣಮಟ್ಟ ಹೇಗಿದೆ ಹಾಗೂ ನಾವು ಟೆಂಡರ್‌ನಲ್ಲಿ ಆಹ್ವಾನಿಸಿರುವ ಆಹಾರ ಪದಾರ್ಥಗಳೇ ಎಂಬುದರ ಬಗ್ಗೆ ಸರಿಯಾದ ರೀತಿಯಲ್ಲಿ ಪರಿಶೀಲಿಸದೆ ಇರುವುದನ್ನು ಪ್ರತ್ಯಕ್ಷದರ್ಶಿಗಳಾಗಿ ಗಮನಿಸದ್ದೇವೆ. ಜೊತೆಗೆ ಅವರ ಬಳಿ ಆಹಾರ ಪದಾರ್ಥಗಳ ಪಟ್ಟಿಯು ಇಲ್ಲವೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟವರನ್ನು ಕರೆಯಿಸಿ ಮಾತನಾಡುವುದೇ ಸೂಕ್ತ. ಇದರ ಬಗ್ಗೆ ನಾವು ಎಷ್ಟೇ ಚರ್ಚಿಸಿದರೂ ವ್ಯರ್ಥವಾಗುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ವಿಷಯದ ಬಗ್ಗೆ ಆಯಾಯ ಹಾಸ್ಟೆಲ್‌ಗಳ ವಾರ್ಡನ್‌ಗಳು, ಡೀನರು ಹಾಗೂ ಸೂಪರ್‌ವೈಸರ್‌ರವರನ್ನು ಕರೆಯಿಸಿ, ತಮ್ಮಗಳ ಮುಂದೆ ತಾವು ಕೇಳುವ ಮಾಹಿತಿಯನ್ನು ಪಡೆಯಲು ಒಂದು ವಿಶೇಷ ಸಭೆಯನ್ನು ಏರ್ಪಡಿಸಲು ವ್ಯವಸ್ಥೆ ಮಾಡುವಂತೆಯು ಹಾಗೂ ಸಭೆಯ ನಂತರ ತಾವು ಕೊಡುವ ಮಾಹಿತಿಗಳ ಆಧಾರದ ಮೇಲೆ ಮುಂದಿನ ಕ್ರಮಕ್ಕೈಗೊಳ್ಳೋಣವೆಂದು ತಿಳಿಸಿದರು.<br><br>ಡಾ. ಹೆಚ್.ಎಸ್. ನಟರಾಜ್ ರವರು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳಾದ ನಾವು ಇದೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಮಾತಾಡುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಸೆಕ್ಯೂರಿಟಿಗಾರ್ಡ್‌ಗಳನ್ನು ನೇಮಿಸುವ ಸಂಬಂಧದ ದಾಖಲಾತಿಗಳನ್ನು ಒದಗಿಸುವಂತೆ ತಮ್ಮಲ್ಲಿ ಕೋರಿರುವುದರಿಂದ ಸದರಿ ದಾಖಲೆಗಳನ್ನು ಒದಗಿಸುವಂತೆ ಕೇಳಿದರು.<br><br>ಕುಲಸಚಿವರು ಮಾತನಾಡಿ, ಟೆಂಡರ್‌ಗೆ ಸಂಬಂಧಿಸಿದ ಮಾಹಿತಿ/ದಾಖಲೆಗಳೆಲ್ಲವೂ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಲಭ್ಯವಿದೆಯೆಂದು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಂದ ದಾಖಲೆಗಳನ್ನು ಪಡೆಯಬಹುದು ಎಂದು ತಿಳಿಸಿದರು. ಹಾಗೆಯೇ ಸದರಿ ಟೆಂಡರ್ ಬಗ್ಗೆ ಮೊದಲೇ ನನ್ನಲ್ಲಿ ಬಂದು ಚರ್ಚೆ ಮಾಡಿದ್ದರೆ ಎಲ್ಲಾ ಮಾಹಿತಿಗಳನ್ನು ಒದಗಿಸುವ ವ್ಯವಸ್ಥೆ ಮಾಡಬಹುದಿತ್ತು ಎಂದು ತಿಳಿಸಿದರು. ಸದರಿ ಟೆಂಡರ್ ಪಾರದರ್ಶಕತೆಯಿಂದ ಕೂಡಿದುದಾಗಿದೆ ಎಂದು ಸಹ ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಅಡಿಗೆಯವರಿಗೆ ಸಂಬಂಧಿಸಿದಂತೆ, ಹಾಸ್ಟೆಲ್‌ಗಳಿಗೆ ಭೇಟಿ ನೀಡಿದ ಸಚಿದರ್ಭದಲ್ಲಿ 15-16 ಮಂದಿಗಳಿಗೆ ಬದಲಾಗಿ ಕೇವಲ 4-5 ಮಂದಿ ಕೆಲಸ ನಿರ್ವಹಿಸುತ್ತಿದ್ದರು. ಆದ್ದರಿಂದ ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡುವಂತೆಯೂ, ಸೆಕ್ಯೂರಿಟಿ ಗಾರ್ಡ್‌ಗಳು ಎಷ್ಟು ಜನ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೆ ಅವರಿಗೆ ನೀಡುವ ಇಪಿಎಫ್, ವೇತನ, ಇಎಸ್‌ಐ ಸೌಲಭ್ಯದ ಬಗ್ಗೆ ಮಾಹಿತಿಯನ್ನು ನೀಡುವಂತೆ ತಿಳಿಸಿದರು. |

| | |
|---|---|
| | ಶ್ರೀ ನಾಗರಾಜು ಸಿ. ರವರು ಮಾತನಾಡಿ, ಸೆಕ್ಯೂರಿಟಿ ಗಾರ್ಡ್‌ಗಳಿಗೆ ಸಂಬಂಧಿಸಿದಂತೆ, 90 ಮಂದಿ ಸೆಕ್ಯೂರಿಟಿಗಳನ್ನು ನೇಮಿಸಿಕೊಂಡಿರುವುದು ಗಮನಕ್ಕೆ ಬಂದಿದೆ. ಅದರಲ್ಲಿ 25 ಜಾಗದಲ್ಲಿ ಅವರುಗಳನ್ನು ನಿಯೋಜಿಸಿರುವುದು. ಆದರೆ ಕೆಲವೊಂದು ಜಾಗದಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳು ಇರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವರು ಮಾತನಾಡಿ, ಸೆಕ್ಯೂರಿಟಿ ಗಾರ್ಡ್‌ಗಳ ನಿಯೋಜನೆಗಾಗಿ ಮ್ಯಾಪಿಂಗ್ ಮಾಡಲಾಗಿದ್ದು, ಪಾಯಿಂಟ್‌ಗಳನ್ನು ಗುರುತಿಸಿ, ಅವಶ್ಯಕತೆಯಿರುವ ಕಡೆಗೆ ಹಾಗೂ ಸಾಧಕ-ಬಾಧಕಗಳನ್ನು ಗಮನಿಸಿ ಸೆಕ್ಯೂರಿಟಿಯವರನ್ನು ನಿಯೋಜಿಸಲಾಗಿದ್ದು, ಸೆಕ್ಯೂರಿಟಿಯವರಿಗೆ ರೂ. 40.00 ಲಕ್ಷಗಳು ವ್ಯಯವಾಗುತ್ತಿತ್ತು. ಪ್ರಸ್ತುತ ರೂ. 24.00 ಲಕ್ಷಗಳಷ್ಟು ಖರ್ಚನ್ನು ಕಡಿಮೆ ಮಾಡಲಾಗಿದೆ ಎಂದು ಸಭೆಗೆ ತಿಳಿಸುತ್ತಾ, ಸೆಕ್ಯೂರಿಟಿಯವರುಗಳನ್ನು ನಿಯೋಜಿಸಿರುವ ಮ್ಯಾಪಿಂಗ್‌ಅನ್ನು ತೆಗೆದುಕೊಂಡು ನಂತರ ಪರಿಶೀಲಿಸಬಹುದು ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಸದರಿಯವರಿಗೆ ಒಂದು ನೋಟಿಸನ್ನು ನೀಡಲು, ಹಾಗೂ ಟೆಂಡರ್ ಆಹ್ವಾನಿಸಿರುವ ಅಧಿಕಾರಿಗಳು, ಹಾಸ್ಟೆಲ್‌ಗಳ ವಾರ್ಡನ್, ಡೀನರು ಹಾಗೂ ಸೂಪರ್‌ವೈಸರ್ ಅವರುಗಳು ಹಾಗೂ ಸಿಂಡಿಕೇಟ್ ಸದಸ್ಯರುಗಳ ಸಮ್ಮುಖದಲ್ಲಿ ಒಂದು ಸಭೆಯನ್ನು ಏರ್ಪಡಿಸಿ, ಸಿಂಡಿಕೇಟ್ ಸದಸ್ಯರುಗಳು ಕೇಳುವ ಪ್ರಶ್ನೆಗಳಿಗೆ ಅವರುಗಳಿಂದ ಉತ್ತರವನ್ನು ಪಡೆದ ನಂತರ ಸಿಂಡಿಕೇಟ್ ಸದಸ್ಯರುಗಳು ನೀಡುವ ಮಾಹಿತಿ ನೀಡಲು ಅಗತ್ಯ ಕ್ರಮವಹಿಸಲಾಗುವುದು ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಡೀನರುಗಳು ನಿಮಗೆ ನೀಡಿರುವ ಮಾಹಿತಿಯು ಸತ್ಯಕ್ಕೆ ದೂರವಾಗಿದ್ದು, ನಾವು ಸಿಂಡಿಕೇಟ್ ಸದಸ್ಯರುಗಳು ಹೇಳುತ್ತಿರುವ ಮಾಹಿತಿಯು ವಾಸ್ತವದಿಂದ ಕೂಡಿದೆಯೆಂದು ತಿಳಿಸಿದರು. |
| **ತೀರ್ಮಾನ** | **2025-26ನೇ ಶೈಕ್ಷಣಿಕ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯಧ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಶಿಕ್ಷಕ ಸಲಹೆಗಾರರ ವತಿಯಿಂದ ಕಲ್ಪಿಸಲಾಗುವ ಭೋಜನ ವ್ಯವಸ್ಥೆಗೆ ಸಂಬಂಧಿಸಿದಂತೆ, ಸುದೀರ್ಘ ಚರ್ಚೆಯ ನಂತರ ಹಾಸ್ಟೆಲ್‌ಗಳ ವಾರ್ಡನ್ ಅವರುಗಳಿಗೆ ಒಂದು ನೋಟಿಸನ್ನು ನೀಡುವುದು ಹಾಗೂ ತುರ್ತಾಗಿ ಒಂದು ಸಭೆಯನ್ನು ಏರ್ಪಡಿಸಿ, ಸಭೆಯಲ್ಲಿ ಟೆಂಡರ್ ಆಹ್ವಾನಿಸಿರುವ ಅಧಿಕಾರಿ, ಹಾಸ್ಟೆಲ್‌ಗಳ ವಾರ್ಡನ್, ಡೀನರು ಹಾಗೂ ಸೂಪರ್‌ವೈಸರ್ ಇವರುಗಳ ಸಮಕ್ಷಮದಲ್ಲಿ ಸಿಂಡಿಕೇಟ್ ಸದಸ್ಯರು ಕೋರುವ ಅಗತ್ಯ ಮಾಹಿತಿಯನ್ನು ನೀಡಲು ತೀರ್ಮಾನಿಸಲಾಯಿತು.** |
| ಸಾಮಾನ್ಯ ಸಭೆ 2025/7.12 | ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಅಧಿನಿಯಮ ರಚನಾ ಸಮಿತಿಯು ಸಿದ್ಧಪಡಿಸಿರುವ ಕರಡು ಅಧಿನಿಯಮಕ್ಕೆ ಅನುಮೋದನೆ ಪಡೆಯುವುದರ ಬಗ್ಗೆ. |
| **ತೀರ್ಮಾನ** | **ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಅಧಿನಿಯಮ ರಚನಾ ಸಮಿತಿಯು ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/7.13 | ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ಟೇಟ್ ಬ್ಯಾಂಕ್ ಮೈಸೂರು ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |

| | |
|---|---|
| ತೀರ್ಮಾನ | **ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ಟೇಟ್ ಬ್ಯಾಂಕ್ ಮೈಸೂರು ಅಧ್ಯಯನ ಪೀಠಕ್ಕೆ ಡಾ. ಎ.ಆರ್. ಶ್ರೀನಾಥ್, ನಿವೃತ್ತ ನಿರ್ದೇಶಕರು, ಭಾರತದ ರಾಷ್ಟ್ರೀಯ ಸಹಕಾರಿ ಒಕ್ಕೂಟ, ನವದೆಹಲಿ ಇವರನ್ನು ಮತ್ತೊಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2025/7.14 | ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠಕ್ಕೆ ಪ್ರೊ. ರಹಮತ್ ತರೀಕೆರೆ, ಹೊಸಪೇಟೆ ಇವರನ್ನು ಮತ್ತೊಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/7.15 | 2025-26ನೇ ಸಾಲಿನಲ್ಲಿ ನಡೆಯಲಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಪರೀಕ್ಷಾ ಮಂಡಳಿ ರಚನೆ ಮಾಡಿರುವ ಬಗ್ಗೆ. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ಕಲಾ, ವಿಜ್ಞಾನ ಮತ್ತು ತಂತ್ರಜ್ಞಾನ, ವಾಣಿಜ್ಯ, ಶಿಕ್ಷಣ ಮತ್ತು ಕಾನೂನು ನಿಕಾಯಗಳ ಪರೀಕ್ಷಾ ಮಂಡಳಿಗಳನ್ನು ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 36ರ ಅನ್ವಯ BOAE ಶಿಫಾರಸ್ಸು ಮಾಡಿರುವ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಒಳಗೊಂಡ ಪರೀಕ್ಷಾ ಮಂಡಳಿಗಳನ್ನು ಪುನರ್ ರಚಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2025/7.16 | "ಪ್ರೊ. ಎಸ್. ಶಿವರಾಜಪ್ಪ ಚಿನ್ನದ ಪದಕ" ದತ್ತಿಯ ಷರತ್ತನ್ನು ತಿದ್ದುಪಡಿ ಮಾಡುವ ಬಗ್ಗೆ. |
| ತೀರ್ಮಾನ | **"ಪ್ರೊ. ಎಸ್. ಶಿವರಾಜಪ್ಪ ಚಿನ್ನದ ಪದಕ" ದತ್ತಿಗೆ ಸಂಬಂಧಿಸಿದಂತೆ ದಾನಿಗಳ ಕೋರಿಕೆಯಂತೆ ದತ್ತಿಯ ಷರತ್ತನ್ನು ತಿದ್ದುಪಡಿ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/7.17 | ಶ್ರೀ ಬಸವರಾಜು ಕೆ., ನಿಲಯ ಸಹಾಯಕ ಇವರು ಅನಧಿಕೃತ ಗೈರು ಹಾಜರಿಯಾಗಿರುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಶ್ರೀ ಬಸವರಾಜು.ಕೆ, ನಿಲಯ ಸಹಾಯಕರು ಇವರು ಧೀರ್ಘಕಾಲ ಅನಧಿಕೃತ ಗೈರುಹಾಜರಾಗಿರುತ್ತಾರೆ. ಇವರ ಗೈರುಹಾಜರಿಯ ಬಗ್ಗೆ ಶಿಕ್ಷಕ ಸಲಹೆಗಾರರು ಯಾವುದೇ ಮಾಹಿತಿಯನ್ನು ವಿಶ್ವವಿದ್ಯಾನಿಲಯಕ್ಕೆ ನೀಡಿರುವುದಿಲ್ಲ. ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಸದರಿ ಉದ್ಯೋಗಿಯ ವೇತನ ಸ್ಥಗಿತವಾಗಿರುವುದನ್ನು ಗಮನಿಸಿದಾಗ, ದೀರ್ಘಕಾಲ ಅನಧಿಕೃತ ಗೈರುಹಾಜರಾಗಿರುವುದು ಕಂಡುಬಂದಿರುತ್ತದೆ. ಇವರಿಗೆ ಎರಡು ವರ್ಷಗಳ ಖಾಯಂಪೂರ್ವ ಸೇವಾವಧಿಯೂ ಸಹ ಇದುವರೆವಿಗೂ ಘೋಷಣೆಯಾಗಿರುವುದಿಲ್ಲ. ದಿನಾಂಕ: 19-03-2022 ರಿಂದ 23-09-2022ರವರೆಗೆ ಒಟ್ಟು 189 ದಿನಗಳು, ದಿನಾಂಕ: 04-11-2023, 15-11-2023 ಮತ್ತು 27-11-2023 ರಂದು ಗೈರುಹಾಜರಾಗಿರುತ್ತಾರೆ. ಇವರಿಗೆ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕರ ಮುಖೇನ ನೋಟಿಸ್ |

| | |
|---|---|
| | ಜಾರಿಗೊಳಿಸಲಾಗಿರುತ್ತದೆ. ನಂತರ ದಿನಾಂಕ 05-02-2024 ರಿಂದ 30-09-2024 ರವರೆಗೆ ಒಟ್ಟು 239 ದಿನಗಳು ಪೂರ್ವಾನುಮತಿಯಿಲ್ಲದೆ ಮತ್ತೊಮ್ಮೆ ಗೈರುಹಾಜರಾಗಿರುತ್ತಾರೆ. ಪ್ರಸ್ತುತ ಸದರಿಯವರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದನ್ನು ಸಂಬಂಧಪಟ್ಟ ಕಛೇರಿ ವತಿಯಿಂದ ತಡವಾಗಿ ವಿಶ್ವವಿದ್ಯಾನಿಲಯದ ಗಮನಕ್ಕೆ ತಂದಿದ್ದು, ಗೈರುಹಾಜರಿಯ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಇದುವರೆವಿಗೂ ಯಾವುದೇ ವೇತನವನ್ನು ಬಿಡುಗಡೆ ಮಾಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸುದೀರ್ಘವಾಗಿ ಗೈರುಹಾಜರಾಗಿರುವ ಕುರಿತು ಶಿಸ್ತು ಕ್ರಮ ಕೈಗೊಳ್ಳಲು ವಿಷಯವನ್ನು ಮಂಡಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕೆಸಿಎಸ್‌ಆರ್ ನಿಯಮದಂತೆ ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | **ಶ್ರೀ ಬಸವರಾಜು ಕೆ., ನಿಲಯ ಸಹಾಯಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ವಿರುದ್ಧ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕರಣ 9(5) (a) ಅನ್ವಯ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2025/7.18 | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಪೂರ್ಣ, ಸ್ಥಿರ, ಚರ ಸ್ವತ್ತುಗಳ ರಕ್ಷಣೆ ಸಂಬಂಧ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಂಸ್ಥೆಯನ್ನು ನೇಮಿಸುವ ಬಗ್ಗೆ-ಅನುಸಮರ್ಥನೆಗಾಗಿ. |
| | ಶ್ರೀ. ನಾಗರಾಜು ಸಿ. ರವರು ಮಾತನಾಡಿ, 25 ಸ್ಥಳಗಳಲ್ಲಿ 90 ಭದ್ರತಾ ಸಿಬ್ಬಂದಿಗಳ ನೇಮಕ ಮಾಡಲಾಗಿದೆ. ಕೇವಲ 17 ಸ್ಥಳಗಳಲ್ಲಿ ಮಾತ್ರ ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಭದ್ರತಾ ಸಿಬ್ಬಂದಿಗಳ ಸ್ಥಳ ನಿಯೋಜನೆ ಕುರಿತು 90 ಜನಕ್ಕೆ 25 ಕಡೆ ಸ್ಥಳ ನಿಯೋಜಿಸಿರುವುದಾಗಿ ತಿಳಿಸಿರುತ್ತಾರೆ. ಏಜೆನ್ಸಿಯವರನ್ನು ಕರೆದು ಇದರ ಬಗ್ಗೆ ಮಾಹಿತಿ ತೆಗೆದುಕೊಳ್ಳಬೇಕೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಭದ್ರತೆಗೆ ಅವಶ್ಯವಿರುವ ಪಾಯಿಂಟ್‌ಗಳನ್ನು ಗುರುತಿಸಿ, 90 ಭದ್ರತಾ ಸಿಬ್ಬಂದಿಗಳನ್ನು ಮಾತ್ರ ನೇಮಕ ಮಾಡಿಕೊಂಡು ಅಗತ್ಯವಿರುವೆಡೆಗೆ ನಿಯೋಜಿಸಲಾಗಿದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ರವರು ಮಾತನಾಡಿ, ವಿಶ್ವವಿದ್ಯಾನಿಲಯ ನಿಗದಿ ಮಾಡಿರುವ ಸ್ಥಳಗಳಲ್ಲಿ ಭದ್ರತಾ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿರಬೇಕು. ಇಲ್ಲವಾದರೆ ಕ್ರಮಕೈಗೊಳ್ಳಬೇಕೆಂದು ತಿಳಿಸುತ್ತಾ, ಕೆಲವು ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿಲ್ಲದಿರುವುದನ್ನು ಗಮನಿಸಲಾಗಿದೆ. ಈ ಕುರಿತು ದಾಖಲೆಗಳನ್ನು ಸಹ ನೀಡುವುದಾಗಿ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯ ಸೂಚಿಸಿರುವ ಸ್ಥಳಗಳಲ್ಲಿ ಭದ್ರತಾ ಸಿಬ್ಬಂದಿಗಳ ಕಾರ್ಯನಿರ್ವಹಿಸದಿರುವ ಕುರಿತು ಮಾಹಿತಿ ನೀಡಿದಲ್ಲಿ, ಟೆಂಡರ್‌ದಾರರಿಗೆ ಈ ಸಂಬಂಧ ನೋಟಿಸ್‌ಅನ್ನು ಜಾರಿ ಮಾಡಿ ಅಗತ್ಯಕ್ರಮವಹಿಸಲಾಗುವುದು. ಈಗಾಗಲೇ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿಗಳನ್ನು ಕಾರ್ಯಾದೇಶ ನೀಡಿರುವುದರಿಂದ, ಟೆಂಡರ್ ಸಂಬಂಧ ಸಿಂಡಿಕೇಟ್ ಸದಸ್ಯರುಗಳಿಗೆ ಯಾವುದೇ ಅಗತ್ಯ |

| | |
|---|---|
| | ಮಾಹಿತಿ ಬೇಕಾದಲ್ಲಿ ಇಂಜಿನಿಯರಿಂಗ್ ವಿಭಾಗದಿಂದ ಪಡೆದು ಸದರಿ ಮಾಹಿತಿಗಳಲ್ಲಿ ಲೋಪದೋಷಗಳು ಕಂಡುಬಂದಲ್ಲಿ ದಾಖಲಾತಿ ಸಲ್ಲಿಸಲು ತೀರ್ಮಾನಿಸಲಾಯಿತು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಪೂರ್ಣ, ಸ್ಥಿರ, ಚರ ಸ್ವತ್ತುಗಳ ರಕ್ಷಣೆ ಸಂಬಂಧ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಂಸ್ಥೆಯನ್ನು ನೇಮಿಸುವ ಸಂಬಂಧ ಟೆಂಡರ್ ಸಂಬಂಧಿತ ದಾಖಲೆ/ಮಾಹಿತಿಯನ್ನು ಸಿಂಡಿಕೇಟ್ ಸದಸ್ಯರುಗಳು ಪರಿಶೀಲಿಸಿದ ನಂತರ ಮುಂದಿನ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2025/7.19 | ವಿಶ್ವವಿದ್ಯಾನಿಲಯದ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರದಲ್ಲಿನ (CSSI) ಬೋಧಕರ ಸೇವೆಯನ್ನು ಮುಂದುವರೆಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರವು ಯುಜಿಸಿ ಯೋಜನೆಯಡಿಯಲ್ಲಿ ನಡೆಯುತ್ತಿದ್ದು, ಯುಜಿಸಿಯಿಂದಲೇ ಅನುದಾನವು ಬಿಡುಗಡೆ ಮಾಡುವುದರಿಂದ ಹಾಗೂ ಯುಜಿಸಿಯ ಸಭೆಯ ನಡಾವಳಿಯಲ್ಲಿ ವಿಶ್ವವಿದ್ಯಾನಿಲಯದ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರದಲ್ಲಿನ (CSSI) ಬೋಧಕರ ಸೇವೆಯನ್ನು ಮುಂದುವರೆಸುವಂತೆ ನಿರ್ದೇಶಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಸಿದ್ಧರಾಜು ವಿ.ಜಿ. ಸಹ ಪ್ರಾಧ್ಯಾಪಕರು ಹಾಗೂ ನಿರ್ದೇಶಕರು (ಪ್ರಭಾರ) ಮತ್ತು ಡಾ. ನಂಜುಂಡ ಡಿ.ಸಿ. ಸಹ ಪ್ರಾಧ್ಯಾಪಕರು ಹಾಗೂ ಉಪನಿರ್ದೇಶಕರು ಇವರುಗಳನ್ನು 2025-26ನೇ ಸಾಲಿನ ಕೇಂದ್ರದಲ್ಲಿನ ಬೋಧಕರ ಸೇವೆಯನ್ನು Tenure Basis ಆಧಾರದ ಮೇಲೆ ಆಯಾ ವರ್ಷಗಳಲ್ಲಿ ಯುಜಿಸಿಯು ನೀಡುವ ನಿರ್ದೇಶನದಂತೆ ಮುಂದಿನ ಆದೇಶದವರೆಗೂ ವಾರ್ಷಿಕವಾಗಿ ಮುಂದುವರಿಸಿಕೊಂಡು ಹೋಗಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2025/7.20 | ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಪ್ಲಾನಿಂಗ್ ಕಮಿಷನ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | **ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಪ್ಲಾನಿಂಗ್ ಕಮಿಷನ್ ಅಧ್ಯಯನ ಪೀಠಕ್ಕೆ ಡಾ. ರವಿ ಭಂಡಾರಿ, ವಿಶ್ವೇಶ್ವರಪುರಂ, ಬೆಂಗಳೂರು ದಕ್ಷಿಣ, ಬೆಂಗಳೂರು ಇವರನ್ನು ಮತ್ತೊಂದು ವರ್ಷಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2025/7.21** | **ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರನ್ನು ಬದಲಾವಣೆ ಮಾಡುವ ಬಗ್ಗೆ.** |
| | ಕುಲಸಚಿವರು ಮಾತನಾಡಿ, ಆಡಳಿತಾತ್ಮಕ, ಶೈಕ್ಷಣಿಕ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಾನೂನು ಅಧ್ಯಯನ ವಿಭಾಗಕ್ಕೆ ಹಾಗೂ ಕಾನೂನು ಶಾಲೆಗೆ ಜ್ಯೇಷ್ಠತೆಯನುಸಾರ ಸರದಿಯ ಆಧಾರದಲ್ಲಿ ಎರಡು ವರ್ಷಗಳಿಗೊಮ್ಮೆ ಮುಖ್ಯಸ್ಥರುಗಳನ್ನು ನೇಮಕ ಮಾಡಿರುವಂತೆಯೇ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರನ್ನು ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಎರಡು ವರ್ಷಗಳ ಅವಧಿಗೆ ನೇಮಿಸಿದರೆ ಸಮಸ್ಯೆಯು |

| | |
|---|---|
| | ಬಗೆಹರಿಯಬಹುದು. ಸದರಿ ವಿಷಯದ ಬಗ್ಗೆ ಚರ್ಚೆ ಏನಾದರೂ ಇದ್ದಲ್ಲಿ ಸದಸ್ಯರು ಚರ್ಚಿಸಬಹುದೆಂದು ತಿಳಿಸುತ್ತಾ, ರೊಟೇಷನ್ ಆಧಾರಧ ಮೇಲೆ ಇಬ್ಬರಲ್ಲಿ ಒಬ್ಬರನ್ನು ನಿರ್ದೇಶಕರನ್ನಾಗಿಯೂ ಮತ್ತೊಬ್ಬರನ್ನು ಅಧ್ಯಕ್ಷರನ್ನಾಗಿ ನೇಮಿಸಿ, ಯಾವುದಾದರೂ ಗುರುತರವಾದ ಆಪಾದನೆಗಳೇನಾದರೂ ಉದ್ಭವಿಸಿದಲ್ಲಿ ಬದಲಾಯಿಸಬಹುದು ಅಥವಾ ರದ್ದುಗೊಳಿಸಲು ಅವಕಾಶವಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಯಾರು ಕ್ರೀಡಾ ಅಧ್ಯಯನ ವಿಭಾಗದ ಅಧ್ಯಕ್ಷರಾಗಿರುತ್ತಾರೋ ಅವರಿಗೆ ಅಧ್ಯಯನ ವಿಭಾಗಧ BOE ಅಧ್ಯಕ್ಷರನ್ನಾಗಿಯೂ ನೇಮಿಸಬೇಕಾಗುತ್ತದೆ ಎಂದು ತಿಳಿಸಿದರು. ಎರಡು ವರ್ಷಗಳ ಅವಧಿಯವರೆಗೆ ಡೀನ್‌ಗಳಾಗಿರುತ್ತಾರೆ. ಡೀನ್‌ಶಿಫ್‌ಅನ್ನು ಮಧ್ಯದಲ್ಲಿ ರದ್ದುಗೊಳಿಸಲು ಸಾಧ್ಯವಿಲ್ಲವೆಂದು ತಿಳಿಸಿದರು.<br><br>ಶ್ರೀ ಮಹದೇಶರವರು ಮಾತನಾಡಿ, ಡಾ. ಸಿ. ವೆಂಕಟೇಶ್ ರವರು ನಿರ್ದೇಶಕರಾಗಿರುವ ದೈಹಿಕ ಶಿಕ್ಷಣ ವಿಭಾಗದಲ್ಲಿ ತಾತ್ಕಾಲಿಕ ದೈಹಿಕ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ರವಿ ಎಂಬುವವರು ಆರ್‌ಟಿಐ ಕಾರ್ಯಕರ್ತರಾಗಿಯೂ ಕೆಲಸ ನಿರ್ವಹಿಸುತ್ತಿದ್ದಾರೆ. ಜೊತೆಗೆ ನಿವೃತ್ತಿ ಹೊಂದಿರುವ ಡಾ. ಕೃಷ್ಣಯ್ಯ ರವರ ಮೇಲೂ ಸಹ ಇಲ್ಲ-ಸಲ್ಲದ ಆರೋಪಗಳನ್ನೆಸಗಿ ಆರ್‌ಟಿಐ ಹಾಕುತ್ತಿರುತ್ತಾರೆ. ಆದ್ದರಿಂದ ಈ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ತರುವಂತಹವರು ಹಾಗೂ ಸಮಸ್ಯೆಯನ್ನು ಉದ್ಭವಿಸುವವರನ್ನು ಕೆಲಸದಿಂದ ಬಿಡುಗಡೆಗೊಳಿಸುವಂತೆ ಆಗ್ರಹಿಸಿದರು.<br><br>ಕುಲಸಚಿವರು ಮಾತನಾಡಿ, ತಾತ್ಕಾಲಿಕ ದೈಹಿಕ ಶಿಕ್ಷಕರನ್ನು ಮುಂದುವರೆಸುವ ಸಂದರ್ಭದಲ್ಲಿ ಶ್ರೀ ರವಿಯವರ ವಿರುದ್ಧ ಇರುವ ದೂರುಗಳ ಬಗ್ಗೆ ದಾಖಲೆ ಒದಗಿಸಿದ್ದರೆ. ಅವರನ್ನು ದೈಹಿಕ ಶಿಕ್ಷಕರನ್ನಾಗಿ ಮುಂದುವರಿಸುತ್ತಿರಲಿಲ್ಲವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಶ್ರೀ ಪ್ರಭಾಕರ್, ಹಿರಿಯ ತರಬೇತಿದಾರರು ಇವರು ಉಚಿತವಾಗಿ ಓವೆಲ್ ಮೈದಾನದಲ್ಲಿ ವಿದ್ಯಾರ್ಥಿಗಳನ್ನು ಅಥ್ಲೆಟ್‌ಗಳನ್ನಾಗಿ ಮಾಡಲು ಉಚಿತವಾಗಿ ತರಬೇತಿ ನೀಡುತ್ತಿರುತ್ತಾರೆ. ಶ್ರೀ ಪ್ರಭಾಕರ್ ರವರು ಹಲವಾರು ಪದಕಗಳನ್ನು ಗಳಿಸಿದ ಮೇಧಾವಿಗಳಾಗಿದ್ದಾರೆ. ಅಂತಹವರ ವಿರುದ್ಧ ಕೆಲಸವನ್ನು ಮಾಡಿ ಅವರಿಗೆ ಸಾಕಷ್ಟು ತೊಂದರೆಯನ್ನು ನೀಡಿರುತ್ತಾರೆ. ಸದರಿ ವಿಷಯವನ್ನು ಸಿಂಡಿಕೇಟ್ ಸದಸ್ಯರಾದ ನಾವುಗಳು ಮಾನ್ಯ ಕುಲಪತಿಗಳ ಗಮನಕ್ಕೂ ತಂದಾಗ ಮುಂ ದಿನ ಶೈಕ್ಷಣಿಕ ವರ್ಷದಲ್ಲಿ ಅವರನ್ನು ತಾತ್ಕಾಲಿಕ ದೈಹಿಕ ಶಿಕ್ಷಕರಾಗಿ ಮುಂದುವರಿಸುವುದಿಲ್ಲವೆಂದು ತಿಳಿಸಿದ್ದರು.<br><br>ಶ್ರೀ ಮಹದೇಶುರವರು ಮಾತನಾಡಿ, ಶ್ರೀ ಪ್ರಭಾಕರ್‌ರವರು ಹಲವಾರು ರಾಷ್ಟ್ರೀಯ ಪದಕಗಳನ್ನು ಗಳಿಸಿದ್ದಾರೆ. ವಿದ್ಯಾರ್ಥಿಗಳಿಗೆ ಅಥ್ಲೆಟಿಕ್ಸ್ ತರಬೇತಿಯನ್ನು ಉಚಿತವಾಗಿ ನೀಡಲು ಮುಂದೆ ಬಂದಿರುವಂತಹ ವ್ಯಕ್ತಿಗೆ ತೊಂದರೆ ನೀಡುತ್ತಿರುವುದು ಸರಿಯಲ್ಲ. ಶ್ರೀ ರವಿಯಂತಹ ವ್ಯಕ್ತಿಗೆ ವಿಶ್ವವಿದ್ಯಾನಿಲಯದಲ್ಲಿ ಉದ್ಯೋಗ ನೀಡಿ ಮುಂದುವರೆಸುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಶ್ರೀ ರವಿಯವರಿಗೆ ಡಾ. ಸಿ. ವೆಂಕಟೇಶ್ ಅಥವಾ ಡಾ. ಮದಿಅಳಗನ್ ಅವರ ಮೇಲೆ ಆರೋಪಗಳಿದ್ದಲ್ಲಿ, ವಿಶ್ವವಿದ್ಯಾನಿಲಯದ ಮಾನ್ಯ |

ಕುಲಪತಿಗಳಾದ ನಿಮ್ಮಲ್ಲಿ ಅಥವಾ ಕುಲಸಚಿವರಲ್ಲಿ ತಮ್ಮ ದೂರುಗಳನ್ನು ಸಲ್ಲಿಸಬೇಕು. ಇಲ್ಲವಾದಲ್ಲಿ ಸಿಂಡಿಕೇಟ್ ಸದಸ್ಯರಾದ ನಾವುಗಳಿರುತ್ತೇವೆ. ಅದೆಲ್ಲವನ್ನು ಬಿಟ್ಟು ಅವರು ಮಾಧ್ಯಮದ ಮೊರೆ ಹೋಗಿ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ತರುವಂತಹದ್ದು ಸರಿಯಲ್ಲವೆಂದು ತಿಳಿಸಿದರು. ವಿಶ್ವವಿದ್ಯಾನಿಲಯದ ವಿರುದ್ಧ ಅರವಿಂದ್ ಶರ್ಮರವರನ್ನು ಎತ್ತಿಕಟ್ಟುವುದು. ಜೊತೆಗೆ ಡಾ. ಸಿ.ವೆಂಕಟೇಶ್ ಅವರು ಹಲವು ಮಾಧ್ಯಮಗಳ ವಿರುದ್ಧ ಸ್ಟೇ ತಂದಿರುತ್ತಾರೆ. ಇವರುಗಳ ವೈಯಕ್ತಿಕ ಜಗಳಕ್ಕೋಸ್ಕರ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ತರುವಂತಹದ್ದು ಎಷ್ಟರ ಮಟ್ಟಿಗೆ ಸರಿ. ಪೋಷಕರು ಹೆಣ್ಣುಮಕ್ಕಳನ್ನು ದೈಹಿಕ ಶಿಕ್ಷಣ ವಿಭಾಗದಲ್ಲಿ ತರಬೇತಿ ಪಡೆಯಲು ಕಳುಹಿಸಬೇಕೆ ಎಂಬುದರ ಬಗ್ಗೆ ಯಕ್ಷ ಪ್ರಶ್ನೆ ಉದ್ಭವವಾಗುತ್ತದೆ. ಸದರಿ ವಿಷಯಗಳಲ್ಲಿ ಡಾ. ಸಿ. ವೆಂಕಟೇಶ್, ಡಾ. ಮದಿಅಳಗನ್, ಶ್ರೀ ರವಿ ಅಥವಾ ಇನ್ನಾವುದೇ ವ್ಯಕ್ತಿ ಭಾಗಿಯಾಗಿದ್ದಾರೋ ಅವರುಗಳ ಬಗ್ಗೆ ಸಮಗ್ರವಾದ ತನಿಖೆಯಾಗಬೇಕೆಂದು ತಿಳಿಸುತ್ತಾ, ಆರ್‌ಟಿಐನಲ್ಲಿ ವ್ಯಕ್ತಿ ಕೇಳುವ ಮಾಹಿತಿಯನ್ನು ಒದಗಿಸಲು ಯಾವ ಅಧಿಕಾರಿ ಅದನ್ನು ನೀಡಬೇಕೆಂಬುದನ್ನು ತಿಳಿಸಿ ಹೇಳಬೇಕಾಗುತ್ತದೆ. ಸದರಿ ವಿಷಯಕ್ಕೆ ಶ್ರೀ ಮಹದೇಶುರವರು ದನಿಗೂಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶ್ರೀ ರವಿ ಎನ್ನುವವರ ಬಗ್ಗೆ ಲಿಖಿತ ದೂರನ್ನು ನೀಡಿದರೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಿಂಡಿಕೇಟ್ ಸದಸ್ಯರುಗಳು ಹಲವಾರು ಬಾರಿ ಶ್ರೀ ರವಿಯವರ ಬಗ್ಗೆ ಚರ್ಚಿಸಲಾಗಿದೆ ಜೊತೆಗೆ ತಮ್ಮ ಗಮನಕ್ಕೂ ವಿಷಯವನ್ನು ತರಲಾಗಿದೆ ಎಂದು ತಿಳಿಸಿದರು.

ಶ್ರೀ ಮಹದೇಶು ರವರು ಮಾತನಾಡಿ, ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಸಂಬಂಧಿಸಿದ ದಾಖಲೆಯನ್ನು ಡಾ. ಮದಿಅಳಗನ್, ಡಾ. ಸಿ. ವೆಂಕಟೇಶ್ ಅಥವಾ ಶ್ರೀ ರವಿಯವರು ನೀಡಿರುತ್ತಾರೋ ಗೊತ್ತಿಲ್ಲ. ಆದರೆ ಶ್ರೀ ಅರವಿಂದ್ ಶರ್ಮ ಎಂಬುವವರು ಒಂದು ಮಾಧ್ಯಮದಲ್ಲಿ ಸಿಂಡಿಕೇಟ್ ಸದಸ್ಯರುಗಳ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿ, ವ್ಯಕ್ತಿತ್ವಕ್ಕೆ ತೇಜೋವಧೆ ಮಾಡಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, ಇಂತಹವರ ವಿರುದ್ಧ ಕಾನೂನಾತ್ಮಕವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶ್ರೀ ರವಿಯವರಿಗೆ ತಕ್ಷಣವೇ ಒಂದು ನೋಟೀಸನ್ನು ನೀಡಿ, ವರದಿ ಪಡೆಯುವಂತೆ ತಿಳಿಸಿದರು.

ಡಾ. ಹೆಚ್.ಎಸ್. ನಟರಾಜುರವರು ಮಾತನಾಡಿ, ವೈಯಕ್ತಿಕವಾಗಿ ಶ್ರೀ ರವಿಯವರು ಮಾತನಾಡಿರುವುದರ ಬಗ್ಗೆ ನಾವೇ ವೈಯಕ್ತಿಕವಾಗಿ ಕಾನೂನಾತ್ಮಕವಾಗಿ ಕ್ರಮತೆಗೆದು ಕೊಂಡು, ಆ ವಿಷಯಗಳನ್ನು ಸದರಿ ಸಭೆಯಲ್ಲಿ ಚರ್ಚಿಸುವುದು ಬೇಡವೆಂದು ತಿಳಿಸುತ್ತಾ, ರೊಟೇಷನ್ ಆಧಾರದ ಮೇಲೆ ಅವರುಗಳನ್ನೇ ನಿರ್ದೇಶಕರನ್ನಾಗಿ ಹಾಗೂ ಅಧ್ಯಕ್ಷರನ್ನಾಗಿ ನೇಮಿಸುವುದರಿಂದ ಸಮಸ್ಯೆಗಳು ಪುನರಾವರ್ತನೆಯಾಗುತ್ತಿರುತ್ತದೆ ಹಾಗೂ ಮಾಧ್ಯಮಗಳಲ್ಲೂ ಬಿತ್ತರಿಸುತ್ತಿರುತ್ತಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ದೈಹಿಕ ಶಿಕ್ಷಣ ವಿಭಾಗದಲ್ಲಿ ಹಲವು ರೀತಿಯ ಲೋಪ ದೋಷಗಳು ಕಂಡುಬರುತ್ತಿರುವುದರಿಂದ ಬೇರೆ ವಿಭಾಗದ ಯಾರಾದರೂ ಪ್ರಾಧ್ಯಾಪಕರನ್ನು ನಿರ್ದೇಶಕರನ್ನಾಗಿ ನೇಮಿಸಬಹುದು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಬೇರೆ ವಿಭಾಗದ ಪ್ರಾಧ್ಯಾಪಕರು

ಗಳನ್ನು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರನ್ನಾಗಿ ನೇಮಿಸಲು ಅವಕಾಶವಿದೆಯೇ ಎಂದು ಕೇಳಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಕಾನೂನು ವಿಭಾಗದಲ್ಲಾಗಲಿ, ಪತ್ರಿಕೋದ್ಯಮ ವಿಭಾಗದಲ್ಲಾಗಲಿ, ದೈಹಿಕ ಶಿಕ್ಷಣ ವಿಭಾಗದಲ್ಲಾಗಲಿ ಪ್ರಾಧ್ಯಾಪಕರುಗಳ ಒಳಜಗಳಗಳಿಂದ ಬೇರೆ ವಿಭಾಗದ ಪ್ರಾಧ್ಯಾಪಕರುಗಳನ್ನು ಅಧ್ಯಕ್ಷರನ್ನಾಗಿಯೋ, ನಿರ್ದೇಶಕರನ್ನಾಗಿಯೋ ನೇಮಿಸಲು ಸಾಧ್ಯವೇ ಎಂದು ತಿಳಿಸುತ್ತಾ, ವಿಚಾರಣಾ ಸಮಿತಿಯನ್ನು ರಚಿಸಿ ಅದರಲ್ಲಿ ಡಾ. ಸಿ. ವೆಂಕಟೇಶ್, ಡಾ. ಮದಿಅಳಗನ್ ಹಾಗೂ ಅತಿಥಿ ಉಪನ್ಯಾಸಕರಾದ ಶ್ರೀ ರವಿಯವರ ವಿರುದ್ಧ ವಿಚಾರಣೆ ನಡೆಸಬಹುದೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಮಿತಿಯಲ್ಲಿ ತಿಳಿಸಿರುವಂತೆ ಡಾ. ಸಿ. ವೆಂಕಟೇಶ್ ಹಾಗೂ ಡಾ. ಮದಿಅಳಗನ್ ಅವರುಗಳ ಹೊಂದಾಣಿಕೆ ಕೊರತೆಯಿಂದ ತೊಂದರೆ ಉದ್ಭವಿಸುತ್ತಿರುವುದರಿಂದ ಬೇರೆ ವಿಭಾಗದ ಪ್ರಾಧ್ಯಾಪಕರುಗಳನ್ನು ನೇಮಿಸುವಂತೆ ಶಿಫಾರಸ್ಸು ಮಾಡಿರುವುದನ್ನು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ದೃಷ್ಟಿಯಿಂದ ಯಾವ ರೀತಿಯ ಕ್ರಮಗಳನ್ನು ಸಾಧ್ಯವೋ ಅದನ್ನೆಲ್ಲವನ್ನು ಮಾಡುತ್ತಿದ್ದೇವೆ. ಅದರಂತೆ ಒಂದೊಂದೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ದೈಹಿಕ ಶಿಕ್ಷಣ ವಿಭಾಗವಾಗಿರುವುದರಿಂದ ಕ್ರೀಡಾ ಚಟುವಟಿಕೆಗಳನ್ನು ಹೆಚ್ಚಾಗಿ ನಿರ್ವಹಿಸಬೇಕಾಗಿರು ವುದರಿಂದ ಹುರುಪಿನಿಂದ ಕೆಲಸವನ್ನು ನಿರ್ವಹಿಸುವವರನ್ನೇ ನಿರ್ದೇಶಕರನ್ನಾಗಿ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಡಾ. ಹೆಚ್.ಎಸ್. ನಟರಾಜ್‌ರವರು ಮಾತನಾಡಿ ಎರಡು ವರ್ಷಗಳ ಅವಧಿಗೆ ನಿರ್ದೇಶಕರನ್ನು ನೇಮಕ ಮಾಡುತ್ತಿರುವುದು ಸರಿಯಾದ ಕ್ರಮವೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ತಾತ್ಕಾಲಿಕ ದೈಹಿಕ ಶಿಕ್ಷಕರಾದ ಶ್ರೀ ರವಿಯವರ ಬಗ್ಗೆ ಯಾವ ಕ್ರಮತೆಗೆದುಕೊಳ್ಳುತ್ತೀರಾ ಎಂದು ಅಧ್ಯಕ್ಷರಲ್ಲಿ ಕೇಳಿದರು.

ಕುಲಸಚಿವರು ಮಾತನಾಡಿ, ಯಾವ ಆಧಾರದ ಮೇಲೆ ಶ್ರೀ ರವಿ ಯವರಿಗೆ ವಿಚಾರಣೆ ನಡೆಸಲು ಸಾಧ್ಯ? ಜೊತೆಗೆ ಯಾರು ದೂರನ್ನು ನೀಡುತ್ತಾರೆ ಎಂದು ಸಭೆಯಲ್ಲಿ ಕೇಳಿದರು. ಮೊದಲೇ ತಾತ್ಕಾಲಿಕ ದೈಹಿಕ ಶಿಕ್ಷಕರನ್ನಾಗಿ ಮುಂದುವರೆಸುವ ಸಂದರ್ಭದಲ್ಲಿ ತಿಳಿಸಿದ್ದರೆ ಅವರನ್ನು ತಾತ್ಕಾಲಿಕ ದೈಹಿಕ ಶಿಕ್ಷಕರನ್ನಾಗಿ ನೇಮಕ ಮಾಡುತ್ತಿರಲಿಲ್ಲವೆಂದು ಮತ್ತೊಮ್ಮೆ ಸಭೆಗೆ ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಡಾ. ಸಿ. ವೆಂಕಟೇಶ್ ಹಾಗೂ ಡಾ. ಮದಿಅಳಗನ್ ಅವರು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳಾಗಿರುವುದರಿಂದ ವಿಭಾಗದ ಪ್ರಾಧ್ಯಾಪಕರುಗಳಾಗಿ ಮುಂದುವರೆಸಿ, ದೈಹಿಕ ಶಿಕ್ಷಣ ವಿಭಾಗಕ್ಕೆ ಬೇರೊಬ್ಬರನ್ನು ನಿರ್ದೇಶಕರನ್ನಾಗಿ ನೇಮಿಸಲು ಕ್ರಮಕೈಗೊಳ್ಳಬಹುದೆಂದು ತಿಳಿಸಿದರು.

ಡಾ. ಹೆಚ್.ಎಸ್. ನಟರಾಜು ರವರು ಮಾತನಾಡಿ, ಎರಡು ವರ್ಷಗಳಿಗೊಮ್ಮೆ ನಿರ್ದೇಶಕರನ್ನಾಗಿ ರೊಟೇಷನ್ ಆಧಾರದ ಮೇಲೆ ಮಾಡಬಹುದು ಎಂದು ತಿಳಿಸುತ್ತಾ,

| | |
|---|---|
| | ಜೊತೆಗೆ ದೈಹಿಕ ಶಿಕ್ಷಣ ವಿಭಾಗದಲ್ಲಿ ಇದುವರೆಗೂ ಯಾವುದೇ ರೀತಿಯ ಸಾಧನೆಯನ್ನು ಮಾಡಿರುವುದಿಲ್ಲ, ಜೊತೆಗೆ ಏನನ್ನಾದರೂ ಸಾಧಿಸುವುದರ ಸಾಧನೆಯ ಬಗ್ಗೆ ಪತ್ರಿಕೆಗಳಲ್ಲಿ ಮಾಧ್ಯಮಗಳಲ್ಲಿ ಬಿತ್ತರವಾಗಿರುವುದಿಲ್ಲವೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, ದೈಹಿಕ ಶಿಕ್ಷಣ ವಿಭಾಗದಲ್ಲಿ ವಿದ್ಯಾರ್ಥಿಗಳನ್ನು ಎತ್ತಿಕಟ್ಟುವುದದರ ಮೂಲಕ ವೈಯಕ್ತಿಕ ವೈಷಮ್ಯವನ್ನು ಸಾಧಿಸುತ್ತಿದ್ದಾರೆ ಎಂದಾದಲ್ಲಿ ಹಾಗೂ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ತರುವಂತಹ ಕೆಲಸವನ್ನು ಮಾಡುತ್ತಿರುವುದರಿಂದ ಅವರನ್ನು ನಿರ್ದೇಶಕರನ್ನಾಗಿ ಮಾಡುವುದೇ ಬೇಡವೆಂದರು.<br><br>ಶ್ರೀ ಮಹದೇಶು ರವರು ಮಾತನಾಡಿ, ದೈಹಿಕ ಶಿಕ್ಷಣ ವಿಭಾಗದಲ್ಲಿ ಕೋಚ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವವರು ಸಹ ಸರಿಯಾದ ರೀತಿಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲವೆಂದು ತಿಳಿಸುತ್ತಾ, ಕ್ರೀಡಾ ಅಭಿರುಚಿಯಿರುವ ಬೇರೊಬ್ಬರನ್ನು ನಿರ್ದೇಶಕರನ್ನಾಗಿ ನೇಮಿಸಬಹುದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಯಾವುದೇ ವಿಚಾರಣೆಯನ್ನು ನಡೆಸಬೇಕಾದರೆ, ಲಿಖಿತ ಮೂಲಕ ದೂರು ದಾಖಲಾಗಬೇಕಾಗುತ್ತದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ರವರು ಮಾತನಾಡಿ, ಎಲ್ಲಾ ಎಂಟು ಮಂದಿ ಸಿಂಡಿಕೇಟ್ ಸದಸ್ಯರುಗಳು ವೈಯಕ್ತಿಕವಾಗಿ ಶ್ರೀ ರವಿ, ತಾತ್ಕಾಲಿಕ ದೈಹಿಕ ಶಿಕ್ಷಕರ ವಿರುದ್ಧ ದೂರನ್ನು ತಮಗೆ ನೀಡುತ್ತೇವೆ. ಜೊತೆಗೆ ವೈಯಕ್ತಿಕವಾಗಿ ಕಾನೂನಾತ್ಮಕವಾಗಿ ಶ್ರೀ ರವಿ, ತಾತ್ಕಾಲಿಕ ದೈಹಿಕ ಶಿಕ್ಷಕರ ವಿರುದ್ಧ ದೂರನ್ನು ದಾಖಲಿಸುತ್ತೇವೆ ಎಂದು ತಿಳಿಸಿದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರ ಹುದ್ದೆಯನ್ನು ಆಡಳಿತಾತ್ಮಕ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಇತರೆ ವಿಭಾಗಗಳಿಂದ ನಿರ್ದೇಶಕರನ್ನಾಗಿ ನೇಮಕ ಮಾಡುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2025/7.22 | ಮೈಸೂರು ವಿಶ್ವವಿದ್ಯಾನಿಲಯ ಹುಣಸೂರು ಮುಖ್ಯರಸ್ತೆಯಲ್ಲಿರುವ ಪೆಟ್ರೋಲ್ ಬಂಕ್‌ನ ಗುತ್ತಿಗೆದಾರರಾದ ಶ್ರೀ ಎ.ಎಲ್. ಸಿದ್ಧಲಿಂಗಸ್ವಾಮಿ, ಮೈಸೂರು ಇವರಿಗೆ ಗುತ್ತಿಗೆ ಅವಧಿಯ ಬಗ್ಗೆ. |
| | ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯ ಹುಣಸೂರು ಮುಖ್ಯ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್‌ನ 150x150 ಜಾಗವನ್ನು ಶ್ರೀ ಎ.ಎಲ್ ಸಿದ್ಧಲಿಂಗ ಸ್ವಾಮಿರವರಿಗೆ ದಿನಾಂಕ 22-08-1974ರಲ್ಲಿ 25 ವರ್ಷಗಳಿಗೆ ಗುತ್ತಿಗೆ ನೀಡಲಾಗಿತ್ತು. ದಿನಾಂಕ 08-03-2004ಕ್ಕೆ ಗುತ್ತಿಗೆ ಅವಧಿ ಮುಕ್ತಾಯವಾಗಿರುತ್ತದೆ. ಶ್ರೀ ಎ.ಎಲ್ ಸಿದ್ಧಲಿಂಗಸ್ವಾಮಿರವರು ನನ್ನ ಜೀವನಕ್ಕೆ ಇದೇ ಮುಖ್ಯ ಆಧಾರವಾಗಿರುವುದರಿಂದ 25 ವರ್ಷಕ್ಕೆ ವಿಸ್ತರಿಸಿ ಎಂದು ವಿನಂತಿಸಿಕೊಂಡಿರುತ್ತಾರೆ. ದಿನಾಂಕ 17-01-2002ರ ಸಿಂಡಿಕೇಟ್ ನಿರ್ಣಯದಂತೆ ನಿಬಂಧನೆಯನ್ನು ವಿಧಿಸಿ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಗುತ್ತಿಗೆ ಅವಧಿಯು ಸೆಪ್ಟೆಂಬರ್ 2021ಕ್ಕೆ ಅಂತ್ಯವಾಗಿದ್ದು, ನಂತರ ಸೆಪ್ಟೆಂಬರ್ 2021 ರಿಂದ ಎರಡು ವರ್ಷಕ್ಕೆ ವಿಸ್ತರಿಸಲಾಗಿರುತ್ತದೆ. ನಂತರ ದಿನಾಂಕ 27-03-2023ರಂದು ಮುಂದಿನ 20 ವರ್ಷಗಳ ಅವಧಿಗೆ ಲೈಸೆನ್ಸ್ ಶುಲ್ಕವನ್ನು ಹೆಚ್ಚಿಸಿ, ನವೀಕರಿಸುವಂತೆ ಕೋರಿರುತ್ತಾರೆ. ಸಿಂಡಿಕೇಟ್ ನಿರ್ಣಯದನ್ವಯ ಪೆಟ್ರೋಲ್ ಬಂಕ್‌ನ |

| | |
|---|---|
| | ಮಾಸಿಕ ಲೈಸೆನ್ಸ್ ಶುಲ್ಕವನ್ನು PWD ದರದಂತೆ ಪರಿಷ್ಕರಿಸಿ ರೂ. 2,00,000/-ಗಳಿಗೆ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ. ಆದರೆ ಇವರು ಇಲ್ಲಿಯವರೆಗೂ ಯಾವುದೇ ಒಪ್ಪಂದ ಮಾಡಿಕೊಂಡಿರುವುದಿಲ್ಲ, ಇವರಿಗೆ ನೋಟಿಸ್ ಜಾರಿ ಮಾಡಿ ತೆರವುಗೊಳಿಸುವುದರ ಬಗ್ಗೆ ಸಿಂಡಿಕೇಟ್ ನಿರ್ಣಯಕ್ಕೆ ಮಂಡಿಸಲಾಗಿದೆಯೆಂದು ತಿಳಿಸಿದರು<br><br>ಮುಂದುವರೆದು, ಪೆಟ್ರೋಲ್ ಬಂಕ್‌ನ ಜಾಗದ ಕುರಿತು ಕಡತವನ್ನು ಪರಿಶೀಲಿಸಿದಾಗ Indian Oil Corporationರವರ ಜೊತೆಯಲ್ಲಿ 1964ರಲ್ಲಿ ಒಡಂಬಡಿಕೆಯಾಗಿರುತ್ತದೆ. ಅಲ್ಲಿಂದ-ಇಲ್ಲಿಯವರೆಗೆ Indian Oil Corporation ರವರು ಮುಂದುವರೆಸುವ ಒಪ್ಪಂದ ಮಾಡಿಕೊಂಡಿರುವುದಿಲ್ಲ. ಆದ್ದರಿಂದ ನೇರವಾಗಿ ಪೆಟ್ರೋಲ್ ಬಂಕ್‌ನ ಜಾಗವನ್ನು Indian Oil Corporation ರವರಿಗೆ ನೀಡಿ ಅವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದರ ಕುರಿತು ಕಾನೂನು ಸಲಹೆಗಾರರೊಂದಿಗೆ ಚರ್ಚಿಸಿದ್ದು, ಕಾನೂನು ಅಭಿಪ್ರಾಯ ಅದಷ್ಟು ಬೇಗ ನೀಡುವಂತೆ ತಿಳಿಸಲಾಗಿದೆ ಎಂದು ತಿಳಿಸಿದರು.<br><br>ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಆಸ್ತಿಯ ಮೂಲ ದಾಖಲಾತಿಗಳನ್ನು ಡಿಜಿಟಲೈಜೇಷನ್ ಮಾಡುವಂತೆ ತಿಳಿಸಿದರು. ಸದರಿಯವರು ಕಳೆದ ಸಾಲಿನಿಂದ ಬಾಡಿಗೆಯನ್ನು ಸಹ ನೀಡಿಲ್ಲದಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿದರು.<br><br>ಶ್ರೀ ಮಹದೇಶು ಇವರು ಮಾತನಾಡಿ, ಪೆಟ್ರೋಲ್ ಬಂಕ್‌ನಲ್ಲಿರುವಂತಹ ಪರಿಕರಗಳು 20 ವರ್ಷಗಳಿಗೆ ಸೀಮಿತವಾಗಿರುತ್ತದೆ, ಲೈಸೆನ್ಸ್ ಶುಲ್ಕ ಬಾಕಿ ಇದೆಯೆಂದು ತಿಳಿಸಿದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯವು ಪೆಟ್ರೋಲ್ ಬಂಕ್‌ನ ಜಾಗವನ್ನು Indian Oil Corporation ರವರಿಗೆ ನೀಡಿ ಅವರೊಂದಿಗೆ ನೇರ ಒಡಂಬಡಿಕೆ ಮಾಡಿಕೊಳ್ಳುವುದು ಅಥವಾ ಹೊಸ ಟೆಂಡರ್ ಆಹ್ವಾನಿಸಲು ಹಾಗೂ ಶ್ರೀ ಎ. ಸಿದ್ಧಲಿಂಗಸ್ವಾಮಿ ಇವರಿಂದ ಪೆಟ್ರೋಲ್ ಬಂಕ್ ಲೈಸೆನ್ಸ್ ಶುಲ್ಕದ ಬಾಕಿಯಿರುವ ಮೊತ್ತವನ್ನು ತುರ್ತಾಗಿ ವಸೂಲಾತಿ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2025/7.23 | ಸ್ಪರ್ಶ್ ಸಮಿತಿ ಪುನರ್‌ರಚಿಸುವ ಬಗ್ಗೆ. |
| • | ಕುಲಸಚಿವರು ಮಾತನಾಡಿ, ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರ ಪತ್ರ ಸಂಖ್ಯೆ ಇಡಿ11/ಯುಎಂಎಸ್/2012, ದಿನಾಂಕ 06-11-2012ರಂದು "Statutes Governing Sensitization to Prevention and Redressal of Sexual Harassment in the University (SPARSH)" ಅಧಿನಿಯಮದನ್ವಯ ಪರಿಷ್ಕೃತ ಆದೇಶ ಸಂಖ್ಯೆ: ಜಿಎಲ್5/103(ಪಿ2)/2001-02 ದಿನಾಂಕ 04-03-2023ರಂದು ಸಮಿತಿ ರಚಿಸಲಾಗಿತ್ತು. ಈ ಸ್ಪರ್ಶ್ ಸಮಿತಿಯಲ್ಲಿ ಪ್ರೊ. ವಿಜಯಕುಮಾರಿ ಕರಿಕಲ್, ಶ್ರೀ ಮೋಹನ್‌ದಾಸ್ ಕೆ ಇವರು ನಿವೃತ್ತಿ ಹೊಂದಿರುತ್ತಾರೆ, ಡಾ. ಚೈತ್ರ ನಾರಾಯಣ್, ಸಿಂಡಿಕೇಟ್ ಸದಸ್ಯರ ಅವಧಿ ಮುಗಿದಿದ್ದು ಹಾಗೂ ಇನ್ನಿಬ್ಬರು ವಿದ್ಯಾರ್ಥಿಗಳ ವಿದ್ಯಾಭ್ಯಾಸ ಮುಗಿದಿರುವುದಾಗಿ ತಿಳಿಸಿದರು. ಸದರಿ ಸಮಿತಿಯ ಅವಧಿಯು 03-03-2026ರಂದು ಅಂತ್ಯಗೊಳ್ಳಲಿದ್ದು ಸಮಿತಿಯನ್ನು ಪುನರ್ ರಚಿಸಲು ವಿಷಯವನ್ನು ಮಂಡಿಸಿರುವುದಾಗಿ ತಿಳಿಸಿದರು. |

| | |
|---|---|
| | ಡಾ. ಶಿಲ್ಪ ಜೆ, ಸಿಂಡಿಕೇಟ್ ಸದಸ್ಯರು ಇವರನ್ನು ಸ್ಪರ್ಶ್ ಸಮಿತಿಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲು ಎಲ್ಲಾ ಸಿಂಡಿಕೇಟ್ ಸದಸ್ಯರು ನಿರ್ಧರಿಸಿದರು.<br><br>ಡಾ. ಎಂ. ಪುಷ್ಪವತಿ ಇವರು ಮಾತನಾಡಿ, ವರ್ಷದಲ್ಲಿ 2 ರಿಂದ 3 ಕಾರ್ಯಕ್ರಮಗಳನ್ನು ಆಯೋಜಿಸಿ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಕಾರ್ಯವನ್ನು ಸ್ಪರ್ಶ್ ಸಮಿತಿಯವರು ಹಮ್ಮಿಕೊಳ್ಳಬೇಕೆಂದು ಸಲಹೆ ನೀಡಿದರು. |
| ತೀರ್ಮಾನ | **ಸ್ಪರ್ಶ್ ಸಮಿತಿಗೆ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2025/7.24 | ವಿಶ್ವವಿದ್ಯಾನಿಲಯದ ಆಂತರಿಕ ದೂರು ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| | ಕುಲಸಚಿವರು ಮಾತನಾಡಿ, ದಿನಾಂಕ 24-11-2025ರಂದು ಕುಮಾರಿ XXXX, ಸಂಶೋಧನಾ ವಿದ್ಯಾರ್ಥಿನಿ, ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಪ್ರೊ. ಆರ್.ಎಸ್. ಉಮಾಕಾಂತ್, ಪ್ರಾಧ್ಯಾಪಕರು, ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದೌರ್ಜನ್ಯವೆಸಗಿರುವ ಬಗ್ಗೆ ಆರೋಪಿಸಿ ವಿಶ್ವವಿದ್ಯಾನಿಲಯಕ್ಕೆ ಪೂರಕ ದಾಖಲೆಗಳೊಂದಿಗೆ ದೂರು ಸಲ್ಲಿಸಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಆಂತರಿಕ ದೂರು ಸಮಿತಿಯು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ: 25-11-2025ರಂದು ಸುದೀರ್ಘವಾಗಿ ಉಭಯತ್ರರರನ್ನು ಕರೆಸಿ ವಿಚಾರಣೆಯನ್ನು ನಡೆಸಲಾಯಿತು. ತದ ನಂತರ ಸಮಿತಿಯು ಮಧ್ಯಂತರ ವರದಿಯನ್ನು ಸಿದ್ಧಪಡಿಸಿ ಮುಚ್ಚಿದ ಲಕೋಟೆಯಲ್ಲಿ ನಡಾವಳಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವುದಾಗಿ ತಿಳಿಸಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಾಗಿದೆಯೆಂದು ತಿಳಿಸಿದರು. ಹಾಗೂ ಸಮಿತಿಯು ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮುಚ್ಚಿದ ಲಕೋಟೆಯನ್ನು ತೆರೆದು ಸಿಂಡಿಕೇಟ್ ಸಭೆಗೆ ಮಂಡಿಸಿದರು.<br><br>ಮುಂದುವರೆದು ಮಾತನಾಡುತ್ತಾ ಈ ಸಂಬಂಧ ತುರ್ತಾಗಿ ಆಂತರಿಕ ದೂರು ಸಮಿತಿ ಸಭೆಯನ್ನು ಕರೆದು ವಿಚಾರಣೆಯನ್ನು ನಡೆಸಲಾಯಿತೆಂದು ತಿಳಿಸುತ್ತಾ, ಫಿರ್ಯಾದುದಾರರು ನೀಡಿರುವ ದಾಖಲೆಗಳು ಪೆನ್‌ಡ್ರೈವ್‌ನಲ್ಲಿದ್ದು ಅದನ್ನು ತಮಗೆ ಹಸ್ತಾಂತರಿಸಿದ್ದಾರೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸಮಿತಿಯು ಮಧ್ಯಂತರ ಕ್ರಮ ತೆಗೆದುಕೊಳ್ಳಲು ತಿಳಿಸಿರುವುದರಿಂದ ಕರ್ನಾಟಕ ವಿಶ್ವವಿದ್ಯಾನಿಲಯ 2000 ಕಾಯ್ದೆ ಅನ್ವಯ ಇಂತಹ ಪ್ರಕರಣಗಳು ಬಂದ ಸಂದರ್ಭದಲ್ಲಿ ಯಾವ ರೀತಿ ಕ್ರಮ ತೆಗೆದುಕೊಳ್ಳಬಹುದು ಎಂಬುದರ ಕುರಿತು ಪರಿಶೀಲಿಸಿ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕರಣ 7(1) (2), Statutes Governing Sensitization to, Prevention of and Redressal for Sexual Harassment in the University (SPARSH)ಗಳನ್ವಯ ಕ್ರಮ ತೆಗೆದುಕೊಳ್ಳಬೇಕಾಗಿದೆಯೆಂದು ತಿಳಿಸಿದರು. |

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಮಾರ್ಗದರ್ಶಕರ ಕೊಠಡಿಯಲ್ಲಿ ಸಿಸಿ ಕ್ಯಾಮರನ್ನು ಏಕೆ ಅಳವಡಿಸಿಲ್ಲವೆಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಭಾಗದ ಮುಖ್ಯಸ್ಥರು ಹಾಗೂ ತರಗತಿಗಳಲ್ಲಿ ಸಿಸಿ ಕ್ಯಾಮರಾವನ್ನು ಅಳವಡಿಸುವಂತಿಲ್ಲವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ Sexual Harassment of Women at Workplace (Prevention, Prohibition and Redressal) Act, 2013ರಲ್ಲಿ ಆಪಾದಿತರ ವಿರುದ್ಧ ಕ್ರಮಕೈಗೊಳ್ಳ ಬಹುದೆಂದಿರುತ್ತದೆಯೆಂದು ಸಭೆಗೆ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕಾನೂನುಬದ್ಧವಾಗಿ ಪ್ರೊ. ಆರ್.ಎಸ್. ಉಮಾಕಾಂತ್ ರವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಡಾ. ಪುಷ್ಪವತಿಯವರು ಮಾತನಾಡಿ, ಆಂತರಿಕ ದೂರು ಸಮಿತಿಯು ಕ್ರಮತೆಗೆದು ಕೊಳ್ಳುವಂತೆ ಶಿಫಾರಸ್ಸು ಮಾಡಿರುತ್ತಾರೆ ಆದರೆ ಶಿಕ್ಷೆಯ ಬಗ್ಗೆ ಸಮಿತಿಯವರು ತಿಳಿಸುವುದಿಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಆಂತರಿಕ ದೂರು ಸಮಿತಿಯವರು ಮುಂದಿನ ವಿಚಾರಣೆಯನ್ನು ಕಾಯ್ದಿರಿಸಿದ್ದು ತಕ್ಷಣವೇ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆಂದರು.

ಕುಲಸಚಿವರು ಮಾತನಾಡಿ, ಆಂತರಿಕ ದೂರು ಸಮಿತಿಯಲ್ಲಿ ಎದುರುದಾರರು ಕಾಲಾವಕಾಶ ನೀಡುವಂತೆ ಕೋರಿರುತ್ತಾರೆ.

ಎಲ್ಲಾ ಸಿಂಡಿಕೇಟ್ ಸದಸ್ಯರು ಪ್ರೊ. ಆರ್.ಎಸ್. ಉಮಾಕಾಂತ್ ಇವರನ್ನು ಪ್ರಾಧ್ಯಾಪಕರ ಹುದ್ದೆಯ ಕರ್ತವ್ಯದಿಂದ ಅಮಾನತ್ತುಗೊಳಿಸುವಂತೆ ತಿಳಿಸಿದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಅಧಿನಿಯಮದನ್ವಯ ಕ್ರಮ ತೆಗೆದುಕೊಳ್ಳಲಾಗುವುದೆಂದರು.

ಮುಂದುವರೆದು, ಆಂತರಿಕ ದೂರು ಸಮಿತಿಯ ಮಧ್ಯಂತರ ವರದಿಯಲ್ಲಿ ಈ ಮುಂದಿನಂತೆ ತಿಳಿಸಿರುತ್ತಾರೆ. "This Committee is hereby exercising and acting under Section 8(e) of Statutes ಎಂದು ತಿಳಿಸಿರುತ್ತೆ. 8(e) ) Taking cognizance of complaints about sexual harassment, the UGC shall conduct enquiries, provide assistance and redressal to the victims, and recommend penalties and other action to be taken ಎಂದಿದೆ. ಆದ್ದರಿಂದ ಆಂತರಿಕ ದೂರು ಸಮಿತಿಯು ಮುಂದಿನ ಕ್ರಮಕ್ಕಾಗಿ ತಮಗೆ ಸಲ್ಲಿಸಿರುತ್ತಾರೆಂದು ತಿಳಿಸಿದರು.

ಇಂತಹ ಪ್ರಕರಣಗಳಲ್ಲಿ ಮೂರು ಅಧಿನಿಯಮಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ. 1) SPARSH Statute, University Statutes ಹಾಗೂ Prohibition of Sexual Harassment (POSH) Act ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್, ಡಾ. ನಟರಾಜ್ ಹೆಚ್.ಎಸ್ ಹಾಗೂ ಡಾ. ಶಿಲ್ಪ ಜೆ. ಇವರುಗಳು ತಪ್ಪಿತಸ್ಥರ ವಿರುದ್ಧ ಈ ಮೂರು ನಿಯಮಗಳನ್ನು ಉಲ್ಲೇಖಿಸಿ ಕಠಿಣ ಶಿಕ್ಷೆ ನೀಡಿ ಎಂದು ತಿಳಿಸಿದರು.

| | |
|---|---|
| | ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಇಂತಹ ಪ್ರಕರಣಗಳು ವಿಶ್ವವಿದ್ಯಾನಿಲಯದಲ್ಲಿ ಪುನರಾವರ್ತನೆಯಾಗದಂತೆ ತಪ್ಪಿತಸ್ಥರಿಗೆ ನೀಡುವ ಶಿಕ್ಷೆಯಿಂದ ಇನ್ನು ಮುಂದೆ ವಿದ್ಯಾರ್ಥಿನಿಯರಿಗೆ ಯಾರೇ ಕಿರುಕುಳ ನೀಡಿದರೆ, ಅವರಿಗೂ ಇದೇ ರೀತಿ ಆಗುತ್ತದೆ ಎಂದು ಸಿಂಡಿಕೇಟ್ ನಿರ್ಣಯವು ಎಚ್ಚರಿಕೆ ನೀಡಿದಂತಾಗುತ್ತದೆ ಎಂದು ತಿಳಿಸಿದರು. ಸದರಿ ವಿಷಯಕ್ಕೆ ಶ್ರೀ ಮಹದೇಶುರವರು ಸಹ ದನಿಗೂಡಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮ ಜರುಗಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಇಂತಹ ಪ್ರಕರಣದಲ್ಲಿ ತಪ್ಪಿತಸ್ಥರು ಸಾಕ್ಷ್ಯಧಾರಗಳನ್ನು ನಾಶಪಡಿಸುವ ಸಂಭವವಿರುವುದರಿಂದ ಪ್ರೊ. ಆರ್.ಎಸ್. ಉಮಾಕಾಂತ್ ಇವರನ್ನು ಕರ್ತವ್ಯದಿಂದ ಅಮಾನತ್ತುಗೊಳಿಸುವುದು ಹಾಗೂ ಈ ಸಂಬಂಧ ತಡೆಯಾಜ್ಞೆ ತರದಿರುವಂತೆ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ Caveat Petition ಅನ್ನು ದಾಖಲಿಸುವುದು ಸೂಕ್ತವೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಇಂತಹ ಪ್ರಕರಣಗಳಲ್ಲಿ ವಾಟ್ಸಫ್ ಮೆಸೇಜ್, ಸಿ.ಸಿ. ಟಿ.ವಿ. ದೃಶ್ಯಾವಳಿಗಳಲ್ಲಿ ಮೇಲ್ನೋಟಕ್ಕೆ ಕಂಡು ಬಂದಿರುವ ಎಲ್ಲಾ ರೀತಿಯ ಸಾಕ್ಷ್ಯಧಾರಗಳನ್ನು ಆಂತರಿಕ ದೂರು ಸಮಿತಿಯು ಪರಿಗಣಿಸಬಹುದಾಗಿದೆಯೆಂದು Prohibition of Sexual Harassment (POSH) Actನಲ್ಲಿ ತಿಳಿಸಿರುತ್ತದೆಯೆಂದು ತಿಳಿಸಿದರು. SPARSH Statuteನಲ್ಲಿ ಅಮಾನತ್ತುಗೊಳಿಸುವ ಬಗ್ಗೆ ತಿಳಿಸಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕರಣ 7(1)(3) ರನ್ವಯ ಶಿಸ್ತುಕ್ರಮ ಜರುಗಿಸಬಹುದೆಂದಿದೆ ಎಂದು ತಿಳಿಸಿದರು.<br><br>ಕುಲಸಚಿವರು (ಪರೀಕ್ಷಾಂಗ) ಇವರು ಮಾತನಾಡಿ, Karnataka State Civil Services Rules 2021ರಲ್ಲಿ A Professor can be suspended on sexual harassment case ಎಂದು ಉಲ್ಲೇಖಿಸಲಾಗಿದೆ ಎಂದು ಸಭೆಗೆ ತಿಳಿಸಿದರು.<br><br>ಸುದೀರ್ಘ ಚರ್ಚೆ ನಡೆಸಿದ ಸಿಂಡಿಕೇಟ್ ಸಭೆಯು ಪ್ರೊ. ಆರ್.ಎಸ್. ಉಮಾಕಾಂತ್, ಪ್ರಾಧ್ಯಾಪಕರು, ರೇಷ್ಮೆಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಪ್ರಾಧ್ಯಾಪಕರ ಹುದ್ದೆಯ ಕರ್ತವ್ಯದಿಂದ ಅಮಾನತುಗೊಳಿಸಲು ನಿರ್ಧರಿಸಿತು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ಆಂತರಿಕ ದೂರು ಸಮಿತಿಯು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 25-11-2025ರಂದು ಸುದೀರ್ಘ ವಿಚಾರಣೆಯನ್ನು ನಡೆಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ವರದಿಯನ್ನು ಮತ್ತು ಅದರೊಳಗಿನ ಶಿಫಾರಸ್ಸುಗಳನ್ನು ಪರಿಗಣಿಸಿ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕರಣ 7(1) (a) ರನ್ವಯ ಪ್ರೊ. ಆರ್.ಎಸ್. ಉಮಾಕಾಂತ್, ಪ್ರಾಧ್ಯಾಪಕರು, ರೇಷ್ಮೆಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಈ ತಕ್ಷಣದಿಂದ ಜಾರಿಗೆ ಬಂದಂತೆ ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತುಗೊಳಿಸಲು ಹಾಗೂ ಅಮಾನತ್ತಿನ ಅವಧಿಯು ಆಂತರಿಕ ದೂರು ಸಮಿತಿಯು ಮೇಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ ಸಲ್ಲಿಸುವ ಅಂತಿಮ ವರದಿಯ ಆಧಾರದ ಮೇಲೆ ತೀರ್ಮಾನ ಕೈಗೊಳ್ಳುವವರೆಗೆ ಅಥವಾ ಮುಂದಿನ ಆದೇಶದವರೆಗೆ ಚಾಲ್ತಿಯಲ್ಲಿರುತ್ತದೆ ಎಂದು ತೀರ್ಮಾನಿಸಲಾಯಿತು.** |

| | |
|---|---|
| ಸಾಮಾನ್ಯ ಸಭೆ 2025/7.25 | ಮಹಾರಾಜ ಕಾಲೇಜಿನ ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ಸ್ನಾತಕೋತ್ತರ ವಿಭಾಗವನ್ನು ಸ್ಥಳಾಂತರಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಮಹಾರಾಜ ಕಾಲೇಜಿನ ಎಂ.ಎಸ್ಸಿ. ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ಸ್ನಾತಕೋತ್ತರ ಪದವಿಯ ವಿಭಾಗದ ಕಟ್ಟಡದಲ್ಲಿ ಅಗತ್ಯವಾದ ಮೂಲಭೂತ ಸೌಲಭ್ಯಗಳ ಕೊರತೆ ಇರುವುದರಿಂದ ಮಾನಸಗಂಗೋತ್ರಿಯ ಆವರಣದಲ್ಲಿರುವ ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರಕ್ಕೆ ಸ್ಥಳಾಂತರಿಸಲು ಸಂಯೋಜಕರು ತಿಳಿಸಿರುತ್ತಾರೆ. ಆದರೆ ವಿಭಾಗದಲ್ಲಿ ಖಾಯಂ ಅಧ್ಯಾಪಕರುಗಳ ಕೊರತೆ ಇದ್ದು, ಪ್ರೊ. ಅರವಿಂದ್‌ರವರ ಸಲಹೆಯನ್ನು ಪಡೆದುಕೊಂಡು ಎರಡು ಕಡೆ ನಿರ್ವಹಣೆ ಮಾಡುವುದರ ಕುರಿತು ಚರ್ಚಿಸಲಾಗುವುದೆಂದರು.<br>ಕುಲಸಚಿವರು ಮಾತನಾಡಿ, ಮಹಾರಾಜ ಕಾಲೇಜಿನ 2025-26ನೇ ಸಾಲಿನ ಪ್ರಥಮ ವರ್ಷದಲ್ಲಿ 27 ಮತ್ತು ದ್ವಿತೀಯ ವರ್ಷದಲ್ಲಿ 45 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ತಮ್ಮನ್ನು ಹಲವಾರು ಬಾರಿ ಭೇಟಿ ಮಾಡಿ ಅವರ ಶೈಕ್ಷಣಿಕ ಸಮಸ್ಯೆಗಳನ್ನು ತಿಳಿಸಿದ್ದು, ಓದುವ ಆಸಕ್ತಿ ಹೆಚ್ಚಾಗಿರುವುದು ಕಂಡುಬಂದಿರುವುದರಿಂದ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಹಿತದೃಷ್ಟಿಯಿಂದ ಆಹವಾಲನ್ನು ಪರಿಗಣಿಸಬೇಕಾಗಿದೆಯೆಂದು ತಿಳಿಸಿದರು. |
| **ತೀರ್ಮಾನ** | **ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸಲು ತೀರ್ಮಾನಿಸಲಾಯಿತು.** |

**ಇತರೆ ವಿಷಯಗಳು:**

1. ಮುಷ್ಕರ ನಡೆಸುವ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿರುವುದು ಕಂಡು ಬಂದಿದ್ದು, ಈ ಕುರಿತು ಕೆಲವು ಮಾನದಂಡಗಳನ್ನು ರೂಪಿಸಲು ಸಿಂಡಿಕೇಟ್ ಸದಸ್ಯರು ತಿಳಿಸಿದರು.

2. ಶ್ರೀ ನಾಗರಾಜು ಸಿ. ರವರು ಮಾತನಾಡಿ, ಮಾನ್ಯ ಕುಲಪತಿಗಳು, ಕುಲಸಚಿವರು ಮತ್ತು ಸಿಂಡಿಕೇಟ್ ಸದಸ್ಯರು ಒಟ್ಟುಗೂಡಿ ಮಾನಸಗಂಗೋತ್ರಿಯ ಆವರಣದಲ್ಲಿರುವ ಫ್ಲೆಕ್ಸ್ ತೆರವುಗೊಳಿಸುವ ಕಾರ್ಯಕ್ಕೆಗೊಳ್ಳಬೇಕಾಗಿದೆ ಎಂದು ತಿಳಿಸಿದರು.

   ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಜಯನಗರ ಪೊಲೀಸ್ ಠಾಣೆಯ ನಿರೀಕ್ಷಕರು ಶ್ರೀ ನಾಗರಾಜು ಸಿ. ರವರಿಗೆ ತಿಳಿಸಿರುವಂತೆ, ಫ್ಲೆಕ್ಸ್ ತೆರವುಗೊಳಿಸುವ ಕುರಿತು ವಿಶ್ವವಿದ್ಯಾನಿಲಯವು ಲಿಖಿತ ರೂಪದಲ್ಲಿ ಪತ್ರ ನೀಡಿದ್ದಲ್ಲಿ ಫ್ಲೆಕ್ಸ್ ತೆರವುಗೊಳಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿರುವುದರಿಂದ, ಲಿಖಿತ ರೂಪದಲ್ಲಿ ಪೊಲೀಸ್ ನಿರೀಕ್ಷಕರಿಗೆ ಪತ್ರವನ್ನು ಬರೆಯುವುದು ಸೂಕ್ತವೆಂದು ಸಲಹೆ ನೀಡಿದರು.

   ಕುಲಸಚಿವರು ಮಾತನಾಡಿ, ಮಾನಸಗಂಗೋತ್ರ ಆವರಣದಲ್ಲಿರುವ ಫ್ಲೆಕ್ಸ್‌ನ್ನು ತೆರವುಗೊಳಿಸಲು ಸಂಬಂಧ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಪರಿಶೀಲಿಸಿ ಸಂಬಂಧಪಟ್ಟ ಮುಖ್ಯಸ್ಥರಿಗೆ ಸೂಚನೆ ನೀಡುವುದಾಗಿ ತಿಳಿಸಿದರು.

೩. ಶ್ರೀ ಮಹದೇಶುರವರು ಮಾತನಾಡಿ, ಮಹಾರಾಜ ಕಾಲೇಜಿನ ಪ್ರಾಂಶುಪಾಲರು ಕಾಲೇಜಿನ ಹಣವನ್ನು ಎಷ್ಟು ಮೊತ್ತದವರೆಗೆ ಬಳಸುವುದಕ್ಕೆ ಅವಕಾಶವಿದೆ ಎಂದು ಹಣಕಾಸು ಅಧಿಕಾರಿಯವರಿಗೆ ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಮಹಾರಾಜ ಕಾಲೇಜಿನ ಪ್ರಾಂಶುಪಾಲರಿಗೆ ಹತ್ತು ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡುವುದಕ್ಕೆ ಅವಕಾಶವಿದೆ, ಮೊದಲಿನಿಂದಲೂ ಕಾಲೇಜಿನ ಮಂಡಳಿ ಖಾತೆಯಿಂದ ಹಣವನ್ನು ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಪ್ರಾಂಶುಪಾಲರು ಹಣವನ್ನು ಖಾತೆಯಿಂದ ಪಡೆಯಲು ಅವಕಾಶವಿದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕಾಲೇಜಿನಲ್ಲಿ ಸಂಗ್ರಹವಾಗುವ ಹಣದಲ್ಲಿ ಹತ್ತು ಸಾವಿರ ರೂ.ಗಳವರೆಗೆ ಬಳಸುವುದಕ್ಕೆ ಅವಕಾಶವಿದ್ದು, ಹೆಚ್ಚಿನ ಮೊತ್ತವನ್ನು ಪಡೆಯಲು ಕುಲಸಚಿವರ ಅನುಮತಿ ಪಡೆಯಬೇಕಾಗಿರುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ನನಗೆ ಬಂದಿರುವ ಮಾಹಿತಿ ಪ್ರಕಾರ ಮಹಾರಾಜ ಕಾಲೇಜಿನ ಪ್ರಾಂಶುಪಾಲರು ಕುಲಸಚಿವರ ಅನುಮತಿ ಪಡೆಯದೆ ಹತ್ತು ಸಾವಿರಕ್ಕೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲು ಚೆಕ್ ನೀಡಿರುವುದು ಗಮನಕ್ಕೆ ಬಂದಿದೆ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಮಹಾರಾಜ ಕಾಲೇಜಿನಲ್ಲಿ ಕುಲಸಚಿವರ ಅನುಮತಿ ಪಡೆಯದೆ ಹತ್ತು ಸಾವಿರಕ್ಕೂ ಹೆಚ್ಚು ಹಣ ಬಿಡುಗಡೆಯಾಗುತ್ತಿರುವುದು ಕಂಡು ಬಂದಿದ್ದು, ಮುಂದೆ ಈ ರೀತಿಯಾಗದಂತೆ ಕ್ರಮವನ್ನು ಸಹ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ, ಹಣಕಾಸು ಅಧಿಕಾರಿಗಳು ಮುಂದೆ ಈ ರೀತಿ ಆಗದಂತೆ ಕ್ರಮವಹಿಸುವುದಾಗಿ ಎಂದು ತಿಳಿಸಿ ತಮ್ಮ ಕರ್ತವ್ಯದಿಂದ ಜಾರಿಕೊಳ್ಳುತ್ತಿದ್ದೀರಿ, ಮಹಾರಾಜ ಕಾಲೇಜಿನಲ್ಲಿ ಕುಲಸಚಿವರ ಅನುಮತಿ ಪಡೆಯದಿರುವುದು ಹಾಗೂ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಖಚಿತ ಮಾಹಿತಿ ಇರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದಿರುತ್ತೇನೆ. ಆದರೆ ವಿಶ್ವವಿದ್ಯಾನಿಲಯದಿಂದ ಯಾವುದೇ ರೀತಿಯ ಕ್ರಮಕೈಗೊಂಡಿರುವುದಿಲ್ಲ. ಪತ್ರದಲ್ಲಿ ತಿಳಿಸಿರುವ ಹಾಗೆ ೩೨ ಖಾತೆಗಳಲ್ಲಿ ಎಷ್ಟೆಷ್ಟು ಹಣ ಬಳಕೆ ಮಾಡಲಾಗಿದೆ ಎಂಬ ಸಂಪೂರ್ಣ ಮಾಹಿತಿ ನೀಡಬೇಕೆಂದು ಕೇಳಿದರು. ಕುಲಸಚಿವರ ಅನುಮತಿ ಪಡೆಯದೇ ಹಣ ವ್ಯಯ ಮಾಡುತ್ತಿರುವುದು ಕಂಡುಬಂದ ಕೂಡಲೇ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರಾಂಶುಪಾಲರನ್ನು ಮಹಾರಾಜ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಮುಂದುವರೆಯುವುದಕ್ಕೆ ಅವಕಾಶವನ್ನು ಸಹ ನೀಡಬಾರದು ಎಂದು ತಿಳಿಸಿದರು. ಜೊತೆಗೆ ಪ್ರಾಂಶುಪಾಲರು ರೂ. ೯೯,೦೦೦/-ಗಳ ಚೆಕ್ ನೀಡಿರುವುದು ಸಹ ಗಮನಿಸಲಾಗಿದೆ ಎಂದು ತಿಳಿಸಿದರು

ಕುಲಸಚಿವರು (ಪರೀಕ್ಷಾಂಗ) ರವರು ಮಾತನಾಡಿ, ಮಹಾರಾಜ ಕಾಲೇಜಿನಲ್ಲಿ ೩೨ ಖಾತೆಗಳಿದ್ದು, ಒಂದೊಂದು ದತ್ತಿಗೂ ಒಂದೊಂದು ಖಾತೆಯನ್ನು ತೆರೆಯಲಾಗಿದೆಯೆಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಈಗಾಗಲೇ ಮಹಾರಾಜ ಕಾಲೇಜಿಗೆ ಭೇಟಿ ನೀಡಿ 32 ಖಾತೆಗಳು ಅವಶ್ಯವಿರುವುದಿಲ್ಲವೆಂದು, ವಿಶ್ವವಿದ್ಯಾನಿಲಯದ ಹಣಕಾಸಿನ ಕ್ರಮವನ್ನೇ ಅಳವಡಿಸಿಕೊಳ್ಳುವುದಕ್ಕೆ ಸೂಚಿಸಲಾಗಿದೆ. ಹಾಗೂ ಶ್ರೀ ನಾಗರಾಜು ಸಿ. ರವರ ಪತ್ರಕ್ಕೆ ಉತ್ತರವನ್ನು ಸಹ ನೀಡಲಾಗುವುದು ಎಂದು ತಿಳಿಸಿದರು.

ಶ್ರೀ ಮಹದೇಶು ರವರು ಮಾತನಾಡಿ, ಇಲ್ಲಿಯತನಕ ನಡೆದಿರುವ ಹಣ ದುರುಪಯೋಗದ ಕುರಿತು ತನಿಖೆಯಾಗಬೇಕು, ತಪ್ಪಿತಸ್ಥರು ಯಾರೆಂದು ಕಂಡುಬಂದಲ್ಲಿ ಸದರಿಯವರಿಂದ ವಸೂಲಾತಿಗೆ ಕ್ರಮವಹಿಸಬೇಕೆಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಪ್ರೊ. ದೇವರಾಜೇಗೌಡ ಇವರು ವಯೋನಿವೃತ್ತಿಯಾಗುವ ಮೊದಲು ಮಹಾರಾಜ ಕಾಲೇಜಿನ ಸಮಸ್ಯೆ ಪರಿಹರಿಸುವ ಕಾರ್ಯವಾಗಬೇಕು ಎಂದು ತಿಳಿಸಿದರು.

ಡಾ. ಶಿಲ್ಪ ಜೆ. ರವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿಯೂ ಸಹ ಹಣ ದುರುಪಯೋಗದ ಕುರಿತು ಹಲವು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಆದರೆ ಇಲ್ಲಿಯವರೆಗೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜಿನಲ್ಲಿ ಲೆಕ್ಕಪರಿಶೋಧನೆ ಚಾಲ್ತಿಯಲ್ಲಿರುವುದರಿಂದ, ವರದಿ ಬಂದ ನಂತರ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಮಹಾರಾಜ ಕಾಲೇಜಿನ 32 ಖಾತೆಗಳನ್ನು ಸ್ಥಗಿತಗೊಳಿಸಿ, ಎರಡು ಖಾತೆಗಳನ್ನು ಮಾತ್ರ ಚಾಲ್ತಿಯಲ್ಲಿರುವಂತೆ ಕ್ರಮವಹಿಸಲು ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮಹಾರಾಜ ಕಾಲೇಜಿಗೆ ಕೂಡಲೇ ಪತ್ರ ಬರೆದು ಕುಲಸಚಿವರ ಅನುಮೋದನೆ ಪಡೆಯದೆ ಬಳಸಿಕೊಂಡಿರುವ ಹಣದ ಕುರಿತು ಮತ್ತು ಯಾವ ಆಧಾರದ ಮೇಲೆ ಹಣವನ್ನು ಬಳಸಿಕೊಂಡಿರುತ್ತಾರೆ ಎಂಬ ಮಾಹಿತಿಯನ್ನು ಪಡೆಯುವಂತೆ ಸೂಚಿಸಿದರು.

4. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ರೌಂಡ್ ಕ್ಯಾಂಟೀನ್ ಹಿಂಭಾಗದಲ್ಲಿರುವ ಮಳಿಗೆಯ ಬಾಡಿಗೆದಾರರಿಂದ Karnataka Public Premises Act ಪ್ರಕಾರ ಬಾಡಿಗೆ ವಸೂಲಾತಿ ಮಾಡಬೇಕಾಗಿರುತ್ತದೆ. ಈ ಕುರಿತು ಇಂಜಿನಿಯರಿಂಗ್ ವಿಭಾಗದವರನ್ನು ಬಾಡಿಗೆ ವಸೂಲಾತಿಗೆ ಸಂಬಂಧಿಸಿದಂತೆ ಯಾವ ಕ್ರಮಕೈಗೊಂಡಿರುತ್ತೀರಿ ಎಂದು ಕೇಳಿದಾಗ, ಸದರಿಯವರು ಕುಲಸಚಿವರಿಂದ ಪತ್ರ ಬಂದಿರುವುದಿಲ್ಲ ಎಂದು ತಿಳಿಸುತ್ತಾರೆ. ಅದೇ ರೀತಿ ಪೆಟ್ರೋಲ್ ಬಂಕ್ ವಿಷಯವನ್ನು ದಿನಾಂಕ 20-08-2025ರ ಸಿಂಡಿಕೇಟ್‌ನಲ್ಲಿ ಚರ್ಚಿಸಲಾಗಿದೆ. ಆದರೆ ಇದುವರೆಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಇಂಜಿನಿಯರಿಂಗ್ ವಿಭಾಗದಲ್ಲಿರುವ ಅಧಿಕಾರಿ/ಸಿಬ್ಬಂದಿಗಳು ನಿಷ್ಠೆ ಹಾಗೂ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸದಿರುವುದೇ ಕಾರಣವಾಗಿದೆ. ಈ ಕುರಿತು ಸದರಿಯವರಿಗೆ **ನೋಟಿಸ್ ಕೂಡ** ನೀಡಲಾಗಿದೆ ಎಂದು ತಿಳಿಸಿದರು. ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು Karnataka Public Premises (EVICTION OF UNAUTHORISED OCCUPANTS) ACT ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

5. ಶ್ರೀ ನಾಗರಾಜು ಸಿ. ರವರು ಮಾತನಾಡಿ, ಶ್ರೀ ಮನು, ತಾತ್ಕಾಲಿಕ ಅತಿಥಿ ಉಪನ್ಯಾಸಕರ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಡಾ. ಟಿ.ಆರ್. ಚಂದ್ರಶೇಖರ್‌ರವರು ವಿಶ್ವವಿದ್ಯಾನಿಲಯಕ್ಕೆ ನೀಡಿರುವ ಪತ್ರವನ್ನು ತಾತ್ಕಾಲಿಕ ಅತಿಥಿ ಉಪನ್ಯಾಸಕರಾದ ಶ್ರೀ ಮನುರವರು ತಮ್ಮ ವಾಟ್ಸ್‌ಆಪ್‌ನಲ್ಲಿ ಹಾಕಿಕೊಂಡಿರುವುದು ತಪ್ಪಾಗಿರುತ್ತದೆ. ಈ ಸಂಬಂಧ ಶ್ರೀ ಮನುರವರ ವಿರುದ್ಧ ಶಿಸ್ತು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿರುವ ಪತ್ರ ಶ್ರೀ ಮನುರವರಿಗೆ ಬಳಿ ಹೇಗೆ ಹೋಗುತ್ತದೆ ಎಂದು ಕೇಳಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಸಾರ್ವಜನಿಕ ದಾಖಲಾತಿಯಾಗಿರು ವುದರಿಂದ (Public Document) ಸಿಂಡಿಕೇಟ್‌ನ ಪತ್ರಗಳು ಶ್ರೀ ಮನುರವರಿಗೆ ಲಭ್ಯವಾಗಿರಬಹುದು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ, ಶ್ರೀ ಮನುರವರು ತಾತ್ಕಾಲಿಕ ಅತಿಥಿ ಉಪನ್ಯಾಸಕರಾಗಿ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ, ಇವರ ವಿರುದ್ಧ ಶಿಸ್ತು ಕ್ರಮಕೈಗೊಳ್ಳಬೇಕು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸಿಂಡಿಕೇಟ್ ಸದಸ್ಯರು ಲಿಖಿತ ರೂಪದಲ್ಲಿ ದೂರನ್ನು ಸಲ್ಲಿಸಿದರೆ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

6. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ ಇವರು ಮಾತನಾಡಿ, ಉರ್ದು ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರು ವಿಭಾಗದ ಕೊಠಡಿಯನ್ನು ತೆರವುಗೊಳಿಸಿರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನಿವೃತ್ತ ಪ್ರಾಧ್ಯಾಪಕರಿಗೆ ವಿಭಾಗದ ಕೊಠಡಿಯನ್ನು ತೆರವುಗೊಳಿಸುವುದಕ್ಕೆ ಈಗಾಗಲೇ ನಿರ್ದೇಶನ ನೀಡಿರುತ್ತೇನೆ ಎಂದು ತಿಳಿಸಿದರು.

7. ಡಾ. ಎಂ. ಪುಷ್ಪವತಿರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಸ್ವಚ್ಛತಾ ಆಂದೋಲನ ಕೈಗೊಳ್ಳಬೇಕಾಗಿರುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಸ್ವಚ್ಛತಾ ಆಂದೋಲನವನ್ನು ಏರ್ಪಡಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

8. ಡಾ. ನಟರಾಜು ಹೆಚ್.ಎಸ್. ಮಾತನಾಡಿ, ಶ್ರೀ.ದೇವರಾಜ ಅರಸುರವರ ಅಧ್ಯಯನ ಪೀಠದ ಬಲವರ್ಧನೆಗೆ ವೈಯಕ್ತಿಕವಾಗಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ಸಹಾಯಾನುದಾನಕ್ಕಾಗಿ ಮನವಿ ಮಾಡಿಕೊಂಡಿರುತ್ತೇನೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಈ ಹಿಂದೆ ಶ್ರೀ.ದೇವರಾಜ ಅರಸುರವರ ಅಧ್ಯಯನ ಪೀಠಕ್ಕೆ ಮೀಸಲಿರಿಸಿದ ಹಣದಲ್ಲಿ ಕ್ರೂಢೀಕೃತವಾಗಿರುವ ಬಡ್ಡಿ ಮೊತ್ತ ತೀರ ಕಡಿಮೆಯಿದ್ದು, ಈ ಹಿನ್ನೆಲೆಯಲ್ಲಿ ಸಂದರ್ಶನ ಪ್ರಾಧ್ಯಾಪಕರಿಗೆ ಮಾಸಿಕ ರೂ. 6,000/-ಗಳನ್ನು ಮಾತ್ರ ಗೌರವ ಸಂಭಾವನೆ ನೀಡುತ್ತಿದ್ದು, ಇದು ತೀರಾ ಕಡಿಮೆ ಮೊತ್ತವಾಗಿದೆಯೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಅಧ್ಯಯನ ವಿಭಾಗದಲ್ಲಿ ಸ್ಥಾಪಿತವಾಗಿರುವ ಮಹನೀಯರುಗಳ ಅಧ್ಯಯನ ಪೀಠದಲ್ಲಿ ಅವರುಗಳ ಜನ್ಮದಿನಾಚರಣೆಯನ್ನು ಆಚರಿಸುವ ಕಾರ್ಯವಾಗಬೇಕೆಂದು ತಿಳಿಸುತ್ತಾ, ಈ ಸಂಬಂಧ ಎಲ್ಲಾ ಪೀಠಗಳ ವಿಭಾಗದ ಅಧ್ಯಕ್ಷರನ್ನು ಕರೆದು ಒಂದು ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸಿದರು.

9. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕುಲಸಚಿವರ ಕೊಠಡಿಯಲ್ಲಿ ಹಲವಾರು ಕಡತಗಳನ್ನು ಗಮನಿಸಿರುತ್ತೇನೆ. ಕುಲಸಚಿವರು ಕಡತಗಳನ್ನು ವೀಕ್ಷಿಸುವುದಕ್ಕೆ ಸಮಯದ ಅಭಾವಗಳು ಇರುತ್ತದೆ, ಆದ್ದರಿಂದ ಕೆಲವೊಂದು ಅಧಿಕಾರವನ್ನು ಉಪಕುಲಸಚಿವರ ವ್ಯಾಪ್ತಿಗೆ ನೀಡುವುದರಿಂದ ಕುಲಸಚಿವರಿಗೆ ಕಡತಗಳ ವೀಕ್ಷಣೆ ಕಡಿಮೆಯಾಗಬಹುದು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಉಪಕುಲಸಚಿವರಿಗೆ ಕೆಲವೊಂದು ಅಧಿಕಾರ ನೀಡುವುದಕ್ಕೆ ನಿಯಮದಲ್ಲಿ ಅವಕಾಶವಿರುವುದಿಲ್ಲ ಹಾಗೂ ಪ್ರತಿನಿತ್ಯ ಬರುವ ಕಡತಗಳನ್ನು ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಇಷ್ಟು ಪ್ರಮಾಣದಲ್ಲಿ ಕಡತಗಳು ವೀಕ್ಷಣೆ ಮಾಡುವ ಬದಲು ಡಿಜಿಟಲೈಜೆಷನ್ ಮಾಡಬಹುದಲ್ಲವೇ ಎಂದು ತಿಳಿಸಿದರು.
ಕುಲಸಚಿವರು ಮಾತನಾಡಿ, ಕಡತಗಳ ವೀಕ್ಷಣೆಯ ಕುರಿತು ಒಂದು ಹೊಸ ರೀತಿಯ ಪ್ರಯತ್ನ ಮಾಡುವ ಉದ್ದೇಶದಿಂದ ಡಿಜಿಟಲೈಜೆಷನ್ ಮಾಡುವ ಕುರಿತು ಮುಂದಿನ ದಿನಗಳಲ್ಲಿ ಕಾರ್ಯಗತ ಮಾಡುವ ಪ್ರಯತ್ನ ಮಾಡುವುದಾಗಿ ತಿಳಿಸಿದರು.

10. ಶ್ರೀ ಮಹದೇಶು ರವರು ಮಾತನಾಡಿ, ಪ್ರೊ. ರಂಗಪ್ಪರವರು ಕುಲಪತಿಗಳಾಗಿದ್ದಂತಹ ಸಂದರ್ಭದಲ್ಲಿ ಪ್ರೀಮಿಯರ್ ಸ್ಟುಡಿಯೋ ಎದುರಿನ ಜಾಗವನ್ನು 99 ವರ್ಷಕ್ಕೆ ವಯಸ್ಕರ ಶಿಕ್ಷಣ ಇಲಾಖೆಗೆ ಲೀಸ್‌ಗೆ ನೀಡಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಹಿಂದೆ ಬಿ.ಎಂ.ಹೆಚ್. ಆಸ್ಪತ್ರೆಯ ಎದುರಿನ ಜಾಗವು ವಿಶ್ವವಿದ್ಯಾನಿಲಯದ ವಶದಲ್ಲಿರುತ್ತದೆ. ಸದರಿ ಕಟ್ಟಡವನ್ನು ವಯಸ್ಕರ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ, ನಂತರ ವಯಸ್ಕರ ಶಿಕ್ಷಣ ಇಲಾಖೆಯವರು ಸರ್ಕಾರಕ್ಕೆ ನೀಡಿರುತ್ತಾರೆ. ಸರ್ಕಾರವು ಸದರಿ ಕಟ್ಟಡವನ್ನು ಕೆಲವು ವರ್ಷಗಳ ಕಾಲ ತಹಶೀಲ್ದಾರ ಕಛೇರಿಯನ್ನಾಗಿ ಸ್ಥಾಪಿಸಲಾಗಿತ್ತು. ನಂತರ ವಿಶ್ವವಿದ್ಯಾನಿಲಯದ ವಶಕ್ಕೆ ಪಡೆಯವುದಕ್ಕೆ ಪ್ರಯತ್ನಿಸಲಾಯಿತು. ಆದರೆ ಸರ್ಕಾರವು ಸದರಿ ಕಟ್ಟಡದಲ್ಲಿ ಮತ್ತೊಂದು ಇಲಾಖೆಯ ಕಛೇರಿಯನ್ನು ಸ್ಥಾಪಿಸಿರುವುದಾಗಿ ತಿಳಿದು ಬಂದಿರುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶು ರವರು ಮಾತನಾಡಿ, ವಯಸ್ಕರ ಶಿಕ್ಷಣ ಇಲಾಖೆಗೆ ನೀಡಿದ ಜಾಗವನ್ನು ಅವರು ಇತರರಿಗೆ ನೀಡುವ ಅಧಿಕಾರವಿದೆಯೇ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸದರಿ ಕಟ್ಟಡವನ್ನು ವಿವಿಧ ಇಲಾಖೆಗಳಿಗೆ ವರ್ಗಾಯಿಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸುವುದಾಗಿ ತಿಳಿಸಿದರು.

11. ಕುಲಸಚಿವರು ಮಾತನಾಡಿ, ಕುಕ್ಕರಹಳ್ಳಿ ಕೆರೆ ಎದುರಿನ ಜಾಗವನ್ನು ಮಹಾನಗರ ಪಾಲಿಕೆ, ಮೈಸೂರು ಆಶ್ರಯ ಯೋಜನೆಯಡಿಯಲ್ಲಿ 20 ಮನೆ ನಿರ್ಮಿಸಲು ಯೋಜಿಸಲಾಗಿದ್ದು, ಈ ಜಾಗದ ಮೂಲ ನಕ್ಷೆಯನ್ನು ಪರಿಶೀಲಿಸಿದಾಗ ಇದು ಹಳ್ಳ ಎಂದು ತಿಳಿದುಬರುತ್ತದೆ. ಹಳ್ಳದಲ್ಲಿ ಯಾವುದೇ ಮನೆಗಳನ್ನು ಕಟ್ಟಬಾರದು ಎಂದು ವಿಷಯವನ್ನು ಕಾಯ್ದಿರಿಸಲಾಗಿದೆ. ಈ ಜಾಗವು ಮೈಸೂರು ವಿಶ್ವವಿದ್ಯಾನಿಲಯದ ಹೆಸರಿನಲ್ಲಿಯೂ ಸಹ ಇರುವುದಿಲ್ಲವೆಂದು ತಿಳಿಸಿದರು.

ಶ್ರೀ ಮಹದೇಶು ರವರು ಮಾತನಾಡಿ, ಹಿಂದಿನ ಕುಲಪತಿಗಳು ಹಳ್ಳ ಇದ್ದಂತಹ ಜಾಗವನ್ನು ಮಣ್ಣಿನಿಂದ ಮುಚ್ಚಿಸಿ ಜನರಿಗೆ ವಾಕಿಂಗ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುತ್ತಾರೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಕೆಲವೊಂದು ಸ್ಥಳವನ್ನು ವಾಣಿಜ್ಯ ಭೂಮಿಯಾಗಿ ಮಾರ್ಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ಕೇಳಿಬರುತ್ತಿದೆ ಹಾಗೂ ನಕ್ಷೆಯಲ್ಲಿಯೂ ಸಹ ಕುಕ್ಕರಹಳ್ಳಿಕೆರೆಯನ್ನು ತೋರಿಸಿರುವುದಿಲ್ಲ, ಈ ಅಂಶಗಳನ್ನು ಮೈಸೂರು ಮಹಾನಗರ ಪಾಲಿಕೆಗೆ ಗಮನಕ್ಕೆ ತರಲಾಗುವುದೆಂದು ತಿಳಿಸಿದರು.

12. ಶ್ರೀ ಸಿ. ನಾಗರಾಜುರವು ಮಾತನಾಡಿ, ಪ್ರೊ. ನಾಗರಾಜು, ಬಿಜಿಎಸ್ ಬಿಎಡ್ ಕಾಲೇಜು ರವರ ವಿರುದ್ಧ ದಿನಾಂಕ 19.11.2025ರಂದು ದೂರು ನೀಡಿರುತ್ತೇನೆ ಎಂದು ತಿಳಿಸುತ್ತಾ, ಸದರಿಯವರು ಎರಡು ಆರ್‌ಟಿಐ ಕಾರ್ಯಕರ್ತರಾಗಿದ್ದು, ನನ್ನನ್ನು ಅಗೌರವವಾಗಿ ನಿಂದನೆ ಮಾಡಿದ್ದು, ಆ ಸ್ಥಳದಲ್ಲಿ ಅಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಸಾಕ್ಷಿಯಾಗಿರುತ್ತಾರೆ, ಜೊತೆಗೆ ಹಲ್ಲೆ ಮಾಡುವುದಕ್ಕೆ ಮುಂದಾಗಿರುತ್ತಾರೆ, ಸಿಸಿ ಕ್ಯಾಮರಾವನ್ನು ಸಹ ಗಮನಿಸಬಹುದಾಗಿದೆ, ಕೂಡಲೇ ಇವರ ವಿರುದ್ಧ ಶಿಸ್ತುಕ್ರಮ ಜರುಗಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ಸಂಬಂಧ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ಅಧ್ಯಕ್ಷರನ್ನಾಗಿ ಪ್ರೊ. ಡಿ. ಆನಂದ್, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ನೇಮಿಸಲು ಹಾಗೂ ಸಮಿತಿಯ ವರದಿ ಬಂದ ನಂತರ ವರದಿಯನುಸಾರ ಕ್ರಮಕೈಗೊಳ್ಳಬಹುದೆಂದು ತಿಳಿಸಿದರು.

13. ಶ್ರೀ ಎಂ. ಶಂಕರ ರವರು ಮಾತನಾಡಿ, ತಾತ್ಕಾಲಿಕ ಅಧ್ಯಾಪಕೇತರ ಸಿಬ್ಬಂದಿಗಳು ಈಗಾಗಲೇ 20, 15, 10 ವರ್ಷಗಳಿಂದ ಕರ್ತವ್ಯ ನಿರ್ವಹಿಸಿಕೊಂಡು ಬಂದಿರುತ್ತಾರೆ. ಅವರಿಗೆ ವೇತನ ಪರಿಷ್ಕರಿಸಬೇಕೆಂದು ತಿಳಿಸಿದರು. ಈ ಕುರಿತು ಇನ್ನಿತರ ಸಿಂಡಿಕೇಟ್ ಸದಸ್ಯರುಗಳು ದನಿಗೂಡಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಪಿಂಚಣಿ ಸೌಲಭ್ಯ ಪಡೆಯಬೇಕಾದರೆ ವಿಶ್ವವಿದ್ಯಾನಿಲಯದಲ್ಲಿರುವ ತಾತ್ಕಾಲಿಕ ಅಧ್ಯಾಪಕೇತರರನ್ನು ತರ್ಕಬದ್ಧಗೊಳಿಸಬೇಕೆಂದು ತಿಳಿಸಿರುತ್ತಾರೆ. ವಿಶ್ವವಿದ್ಯಾನಿಲಯದಿಂದ ತಾತ್ಕಾಲಿಕ ಸಿಬ್ಬಂದಿಗಳನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ತಿಳಿಸುತ್ತಾ, 20, 15, 10 ವರ್ಷಗಳಿಂದ ಕರ್ತವ್ಯ ನಿರ್ವಹಿಸಿಕೊಂಡು ಬಂದಿರುವ ಅಧ್ಯಾಪಕೇತರರ ಪರವಾಗಿರುತ್ತೇವೆ. ಆದರೆ ವಿಶ್ವವಿದ್ಯಾನಿಲಯದ ಆರ್ಥಿಕ ಸಂಕಷ್ಟದಲ್ಲಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.

14. ಡಾ. ಶಿಲ್ಪ ಜೆ. ರವರು ಮಾತನಾಡಿ, ಸ್ಕೂಲ್ ಆಫ್ ಪ್ಲಾನಿಂಗ್ ಮತ್ತು ಆರ್ಕಿಟೆಕ್ಚರ್ ವಿಭಾಗದಲ್ಲಿ ನಾಲ್ಕು ಜನ ಸಹಾಯಕ ಪ್ರಾಧ್ಯಾಪಕರುಗಳಿದ್ದು, ಅವರಿಗೆ ನೀಡುತ್ತಿರುವ ವೇತನ ಕಡಿಮೆಯಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸ್ಕೂಲ್ ಆಫ್ ಪ್ಲಾನಿಂಗ್ ಮತ್ತು ಆರ್ಕಿಟೆಕ್ಚರ್ ವಿಭಾಗದ ನಾಲ್ಕು ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿಯು ಅಸಿಂಧುವಾಗಿರುತ್ತದೆ, ಲೆಕ್ಕಪರಿಶೋಧಕರು ಆಕ್ಷೇಪಣೆ ವ್ಯಕ್ತಪಡಿಸಿದರೆ ಅತಿಥಿ ಉಪನ್ಯಾಸಕರಿಗೆ ನೀಡುವ ವೇತನವನ್ನೇ ಇವರಿಗೂ ಸಹ ನೀಡಬೇಕಾಗಿರುತ್ತದೆಯೆಂದು ಎಂದು ತಿಳಿಸಿದರು.

15. ಶ್ರೀ ಎಂ.ಶಂಕರರವರು ಮಾತನಾಡಿ, ಭೂ ವಿಜ್ಞಾನ ವಿಭಾಗದಲ್ಲಿ ನಾಲ್ಕು ವರ್ಷಗಳ ಸೇವಾನುಭವವಿರುವ ಶ್ರೀ ಅಭಿಜಿತ್ ಎಂಬ ಅತಿಥಿ ಉಪನ್ಯಾಸಕರಿಗೆ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ 04 ಗಂಟೆಗಳ ಕಾರ್ಯಭಾರವನ್ನು ನೀಡಲಾಗಿರುತ್ತದೆ, ಈಗ ಹೊಸದಾಗಿ ಆಯ್ಕೆಯಾಗಿರುವ ಶ್ರೀ ಪ್ರದೀಪ್ ಎಂಬ ಅತಿಥಿ ಉಪನ್ಯಾಸಕರುಗಳಿಗೆ 08 ಗಂಟೆಗಳ ಕಾರ್ಯಭಾರ ನೀಡಲಾಗಿರುತ್ತದೆ, ಆದ್ದರಿಂದ ಶ್ರೀ ಅಭಿಜಿತ್, ಅತಿಥಿ ಉಪನ್ಯಾಸಕರಿಗೆ ಇವರಿಗೂ ಸಹ 08 ಗಂಟೆಗಳ ಕಾರ್ಯಭಾರವನ್ನು ನೀಡಬೇಕೆಂದು ತಿಳಿಸಿದರು.

16. ಮಾನ್ಯ ಕುಲಪತಿಗಳು ಮಾತನಾಡಿ, ಪ್ರತಿಯೊಂದು ವಿಭಾಗದಲ್ಲಿನ ಅಧ್ಯಕ್ಷರು ತಮ್ಮ ವಿಭಾಗದ ಕಾರ್ಯಭಾರವನ್ನು ಹಂಚುವ ಸಮಯದಲ್ಲಿ ಒಟ್ಟಾರೆ ಕಾರ್ಯಭಾರಗಳ ಮಾಹಿತಿ ಪಡೆದುಕೊಂಡು, ವಿಭಾಗದ ಅಧ್ಯಾಪಕರು ತಮ್ಮ ಅಧ್ಯಾಪಕರುಗಳಿಗೆ ಹಂಚಿಕೆ ಮಾಡಿರುವ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಅದರಂತೆ ವಿಶ್ವವಿದ್ಯಾನಿಲಯವು ಅನುಮೋದನೆ ನೀಡಿರುತ್ತದೆ. ಉಳಿದ ಕಾರ್ಯಭಾರದ ಮಾಹಿತಿಯನ್ನು ವಿಶ್ವವಿದ್ಯಾನಿಲಯ ಪಡೆದುಕೊಂಡು ಅಧ್ಯಕ್ಷರ ಸಮ್ಮುಖದಲ್ಲಿ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ. ಇದರಲ್ಲಿ ಕುಲಪತಿಗಳ ಯಾವುದೇ ಹಸ್ತಕ್ಷೇಪ ಇರುವುದಿಲ್ಲ ಎಂದು ತಿಳಿಸಿದರು.

17. ಶ್ರೀ ನಾಗರಾಜು ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಈಜುಕೊಳವನ್ನು ಉನ್ನತೀಕರಿಸುವಂತೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಈಜುಕೊಳವನ್ನು ಉನ್ನತೀಕರಿಸುವಲ್ಲಿ ಅಗತ್ಯ ಕ್ರಮಕ್ಕೈಗೊಳ್ಳುವುದಾಗಿ ತಿಳಿಸಿದರು.

18. ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ 106ನೇ ಘಟಿಕೋತ್ಸವವನ್ನು ಸದ್ಯದಲ್ಲಿಯೇ ಆಯೋಜಿಸಬೇಕೆಂಬ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ, ಸದರಿ ಘಟಿಕೋತ್ಸವದಲ್ಲಿ ಗೌರವ ಡಾಕ್ಟೊರೇಟ್‌ಗೆ ನಾಮನಿರ್ದೇಶನ ಮಾಡುವ ಸಂಬಂಧ ಖ್ಯಾತನಾಮರ ಹೆಸರನ್ನು ಸೂಚಿಸುವಂತೆ ಸಿಂಡಿಕೇಟ್ ಸದಸ್ಯರುಗಳಿಗೆ ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟೊರೇಟ್ ನೀಡುವ ಸಂಬಂಧ ಎರಡು ವರ್ಷಗಳಿಂದ ತಾವು ಹೆಸರಿಸಿರುವ ವ್ಯಕ್ತಿಗಳಿಗೆ ಬದಲಾಗಿ ಮಾನ್ಯ ರಾಜ್ಯಪಾಲರಿಂದ ಆಯ್ಕೆ ಮಾಡಿ ಕಳುಹಿಸಿದ ವ್ಯಕ್ತಿಗಳಿಗೆ ಗೌರವ ಡಾಕ್ಟೊರೇಟ್ ನೀಡಲಾಗುತ್ತಿದೆ. ಈ ಸಂಬಂಧ 105ನೇ ಘಟಿಕೋತ್ಸವ ದಿನದಂದು ತಾವು ಅಸಮ್ಮತಿ ಪತ್ರವನ್ನು ಹಿಂದಿನ ಕುಲಸಚಿವರಿಗೆ ನೀಡಿದ್ದೇನೆಂದು ತಿಳಿಸಿದರು. ಆದ್ದರಿಂದ ಮಾನ್ಯ ಕುಲಪತಿಗಳು 106ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟೊರೇಟ್‌ಗೆ ಸಂಬಂಧಿಸಿದಂತೆ ಮಾನ್ಯ ರಾಜ್ಯಪಾಲರಿಗೆ ಬರೆಯುವ ಪತ್ರದಲ್ಲಿ ಸಿಂಡಿಕೇಟ್ ಸದಸ್ಯರು ಸೂಚಿಸಿರುವ ವ್ಯಕ್ತಿಗಳಿಗೆ ಗೌರವ ಡಾಕ್ಟೊರೇಟ್ ನೀಡಿ ಎಂದು ಉಲ್ಲೇಖಿಸುವಂತೆ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, 105ನೇ ಘಟಿಕೋತ್ಸವದ ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯರುಗಳಾದ ತಾವುಗಳು ಸೂಚಿಸಿದ್ದ ಹೆಸರುಗಳನ್ನೊಳಗೊಂಡಂತೆ ಎಲ್ಲ ಖ್ಯಾತನಾಮರುಗಳ ಪಟ್ಟಿಯನ್ನು ಗೌರವಾನ್ವಿತ ಕುಲಾಧಿಪತಿಗಳಿಂದ ರಚಿಸಲಾಗಿರುವ ಆಯ್ಕೆ ಸಮಿತಿ(Screening Committee)ಯ ಕಳುಹಿಸಲಾಗಿದ್ದು, ಸದರಿ ಆಯ್ಕೆ ಸಮಿತಿಯನುಸಾರ ಆಯ್ಕೆಯಾದ ಖ್ಯಾತನಾಮರುಗಳ ಪಟ್ಟಿಯನ್ನು ಗೌರವಾನ್ವಿತ ಕುಲಾಧಿಪತಿಗಳ ಅಂಕಿತದೊಂದಿಗೆ ಗೌರವ ಡಾಕ್ಟೊರೇಟ್ ಹಾಗೂ ಡಿ.ಲಿಟ್ ಪ್ರದಾನ ಮಾಡಲಾಗುತ್ತದೆ. ಅದೇ ರೀತಿಯಾಗಿ ಈ ಬಾರಿಯು ತಾವುಗಳು ಶಿಫಾರಸ್ಸು ಮಾಡುವ ಹೆಸರುಗಳನ್ನು ಆಯ್ಕೆ ಸಮಿತಿಗೆ ಕಳುಹಿಸಲಾಗುವುದು ಎಂದು ತಿಳಿಸುತ್ತಾ, ಸದರಿ ಆಯ್ಕೆ ಪಟ್ಟಿಯಲ್ಲಿ ವಿಶ್ವವಿದ್ಯಾನಿಲಯದ ಯಾವುದೇ ಹಸ್ತಕ್ಷೇಪವಿರುವುದಿಲ್ಲವೆಂದು ಸಹ ತಿಳಿಸಿದರು.

ಶ್ರೀ ನಾಗರಾಜು ಸಿ.ರವರು ಮಾತನಾಡಿ, ಗೌರವ ಡಾಕ್ಟೊರೇಟ್ ನೀಡುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನವಾಗುವ ಖ್ಯಾತನಾಮರಿಗೆ ಗೌರವ ಡಾಕ್ಟೊರೇಟ್ ನೀಡಬೇಕು. ಇಲ್ಲವಾದರೆ ಸಿಂಡಿಕೇಟ್ ಸಭೆಯಲ್ಲಿ ಡಾಕ್ಟೊರೇಟ್ ನೀಡುವ ಹೆಸರುಗಳನ್ನು ಸೂಚಿಸುವಂತೆ ತಿಳಿಸಬಾರದೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ಸೂಚಿಸುವ ಹೆಸರಿಗೆ ಗೌರವ ಡಾಕ್ಟೊರೇಟ್ ನೀಡದಿದ್ದಲ್ಲಿ, ಘಟಿಕೋತ್ಸವ ಸಂದರ್ಭದಲ್ಲಿ ಅಸಮ್ಮತಿ ಪತ್ರವನ್ನು ನೀಡುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸದಸ್ಯರು ಸೂಚಿಸುವ ವ್ಯಕ್ತಿಗಳ ಹೆಸರಿನೊಂದಿಗೆ ಅವರ ಸ್ವವಿವರವನ್ನು ಸಲ್ಲಿಸಿ, ಗೌರವಾನ್ವಿತ ರಾಜ್ಯಪಾಲರ ಕಛೇರಿಗೆ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು. ನಂತರ ಗಣ್ಯವ್ಯಕ್ತಿಗಳ ಹೆಸರುಗಳನ್ನು ಕ್ರೋಢೀಕರಿಸಿ ಸಲ್ಲಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಅಂತಿಮವಾಗಿ ಕುಲಸಚಿವರು ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಗೌರವಾನ್ವಿತ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಹಾಗೂ ಅಧ್ಯಕ್ಷರು